# ನೇಸರು

₹ 5/-

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXII - 7 July 2014

PAGES 16



ಮುಂಗಾರು ಮಳೆಯ ತುಂತುರು ನಿನಾದ

**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574

Email : mysoreassociation.mumbai@gmail.com

## ತವಾ ಕಾರ್ನ್ ಪಾವ್ ಭಾಜಿ



**ಬೇಕಾಗುವ ಪದಾರ್ಥಗಳು :** ಕ್ಯಾಪ್ಸಿಟಿಕ್ಸ್ - 1/4 kg, ಟೊಮೇಟೋ - 1/4 kg, ಜೀರಿಗೆ ಪುಡಿ - 1/4 ಚಮಚ, ಗರಂ ಮಸಾಲ - 1 ಚಮಚ, ಅಚ್ಚ ಮೆಣಸಿನ ಪುಡಿ - 1 ಚಮಚ, ಅರಿಶಿನ - ಚಿಟಿಕೆ, ಮೆಂತ್ಯ ಸೊಪ್ಪು - 1 ಕಪ್, ಬೇಯಿಸಿದ ಕಾರ್ನ್ - 1 ಕಪ್, ಪನ್ನೀರ್ - 250 gm, ಉಪ್ಪು - ರುಚಿಗೆ ತಕ್ಕಷ್ಟು.

**ಮಾಡುವ ವಿಧಾನ :** ಒಂದು ತವಾಗೆ ತುಪ್ಪ ಹಾಕಿ ಬಿಸಿ ಮಾಡಿಕೊಳ್ಳಿ, ಹೆಚ್ಚಿದ ಕ್ಯಾಪ್ಸಿಕಂ ಹಾಕಿ ಚೆನ್ನಾಗಿ ಆಡಿಸಿಕೊಳ್ಳಿ. ಟೊಮೇಟೋವನ್ನು ಸೇರಿಸಿ ಹುರಿದುಕೊಳ್ಳಿ. ಉಳಿದೆಲ್ಲಾ ಮಸಾಲೆ ಪುಡಿಗೆ ನೀರನ್ನು ಹಾಕಿ ಕಡಿಮೆ ಉರಿಯಲ್ಲಿ ನಿಧಾನವಾಗಿ ಕುದಿಸಿ ಬೇಯಿಸಿ. ನಂತರ ಮೆಂತ್ಯೆಸೊಪ್ಪು ಮತ್ತು ಬೇಯಿಸಿದ ಕಾರ್ನ್‌ನ್ನು ಸೇರಿಸಿ. ತರಕಾರಿಗಳನ್ನು ಹದವಾಗಿ ಕುಟ್ಟಿ. ಕೊನೆಗೆ ಪನ್ನೀರ್ ತುಂಡನ್ನು ಸೇರಿಸಿ ಕುದಿಯುತ್ತಿರುವ ತರಕಾರಿ ಮಸಾಲೆ ಮಿಶ್ರಣಕ್ಕೆ 1 ಚಮಚ ತುಪ್ಪ ಹಾಕಿ ನಿಂಬೆರಸ ಸೇರಿಸಿ, ಬಿಸಿಬಿಸಿಯಾಗಿ ಬಳಸಿ.

ಬಡಿಸಲು ಪಾವ್‌ನ್ನು ಚಪ್ಪಟೆಯಾಗಿರುವಂತೆ ಅರ್ಧಕ್ಕೆ ಕತ್ತರಿಸಿ ಬಿಸಿ ಕಾವಲಿಯ ಮೇಲೆ ಬೆಣ್ಣೆ ಸವರಿ, ಪಾವ್‌ನ ಒಳಗೂ ಹಾಗೂ ಹೊರಗೂ ಮಸಾಲೆ ಸೇರಿಸಿ ಬೆಯಿಸಿರಿ. ಬೇಯಿಸಿದ ಪಾವ್ ಬಿಸಿಯಾಗಿದ್ದಾಗಲೇ ಬಡಿಸಿ. ನಿಂಬೆಹಣ್ಣನ್ನು ಕತ್ತರಿಸಿ ಅತಿ ಸಣ್ಣಗೆ ಹೆಚ್ಚಿದ ಈರುಳ್ಳಿ ಪಾವ್‌ನೊಂದಿಗೆ ಇಡಿ.

## ಟೊಮೇಟೋ ಮತ್ತು ಕಾರ್ನ್ ಸೂಪ್




**ಬೇಕಾಗುವ ಪದಾರ್ಥಗಳು :** ಟೊಮೇಟೋ - 3, ಈರುಳ್ಳಿ - 1, ಬೆಳ್ಳುಳ್ಳಿ - 4 ಎಸಳು, ಪಲಾವ್ ಎಲೆ - 1, ಕ್ಯಾರೆಟ್ - 1/2 ಕಪ್, ಕರಿಮೆಣಸಿನ ಪುಡಿ - 1/4 ಚಮಚ, ನೀರು - 1 ಕಪ್ ತರಕಾರಿ ಬೇಯಿಸಿದ ನೀರು, ಬೇಯಿಸಿದ ಸ್ವೀಟ್ ಕಾರ್ನ್ - 1/4 ಕಪ್, ಉಪ್ಪು - ರುಚಿಗೆ ತಕ್ಕಷ್ಟು.

**ಮಾಡುವ ವಿಧಾನ :** ಒಂದು ಅಗಲ ಬಾಣಲೆಗೆ ಎಣ್ಣೆ ಹಾಕಿ ಬಿಸಿ ಮಾಡಿಕೊ ಈರುಳ್ಳಿ ಹಾಕಿ ಚೆನ್ನಾಗಿ ಬಾಡಿಸಿಕೊಳ್ಳಿ. ಬೆಳ್ಳುಳ್ಳಿ, ಪಲಾವ್ ಎಲೆ, ಟೊಮೇಟೋ ಕ್ಯಾರೆಟ್ ಸೇರಿಸಿ ಹುರಿದುಕೊಳ್ಳಿ. ಕರಿಮೆಣಸಿನ ಪುಡಿ, ಉಪ್ಪು ನೀರನ್ನು ಹಾಕಿ ಕಡಿಮೆ ಉರಿಯಲ್ಲಿ ನಿಧಾನವಾಗಿ ಕುದಿಸಿ ಬೇಯಿಸಿ. ಆರಿದ ನಂತರ ಮಿಕ್ಸಿಗೆ ಹಾಕಿ ರುಬ್ಬಿ ಶೋಧಿಸಿಕೊಳ್ಳಿ. ಅದೇ ಬಾಣಲೆಗೆ ತರಕಾರಿ ಬೇಯಿಸಿದ ನೀರು, ರುಬ್ಬಿದ ಮಿಶ್ರಣ, ಬೇಯಿಸಿದ ಸ್ವೀಟ್ ಕಾರ್ನ್‌ನ್ನು ಹಾಕಿ 5 ನಿಮಿಷ ಕಡಿಮೆ ಉರಿಯಲ್ಲಿ ನಿಧಾನವಾಗಿ ಕುದಿಸಿ. ಬಿಸಿಬಿಸಿಯಿರುವಾಗಲೇ ಸವಿಯಿರಿ.

*- ಶ್ರೀಮತಿ ಭಾವನಾ ಮಧುಸೂಧನ್*

## ಕಾಂತಾವರ ಕನ್ನಡ ಸಂಘದಲ್ಲಿ ಪೂರ್ಣಿಮಾ ಸುಧಾಕರ ಶೆಟ್ಟಿ ಅವರಿಂದ ನುಡಿನಮನ




ಕಾಂತಾವರ:– ಕಾಂತಾವರ ಕನ್ನಡ ಸಂಘದ ತಿಂಗಳ ನುಡಿನಮನ ಕಾರ್ಯಕ್ರಮದಲ್ಲಿ ಕುಸುಮಾಕರ ದೇವರಗಣ್ಣೂರ ಅವರ ನಾಲ್ಕನೆಯ ಆಯಾಮ ಕಾದಂಬರಿಯ ಕುರಿತು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸಂಶೋಧನ ಸಹಾಯಕಿ, ಪ್ರಾಧ್ಯಾಪಕಿ ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಇತ್ತೀಚೆಗೆ ಉಪನ್ಯಾಸ ನೀಡಿದರು.

ಈ ಕಾದಂಬರಿ ಕನ್ನಡದ ಮೌಲಿಕ ಕಾದಂಬರಿಗಳಲ್ಲಿ ಒಂದು ಎಂದು ವಿಮರ್ಶಕರಿಂದ ಮೆಚ್ಚುಗೆಗೆ ಪಾತ್ರವಾಗಿದೆ. ನಾಲ್ಕನೆಯ ಆಯಾಮ ಕಾದಂಬರಿ ನವ್ಯ ಸಾಹಿತ್ಯದ ಮೇಲೆ ಗಾಢ ಪ್ರಭಾವ ಬೀರಿದ್ದ ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಇದು ರೂಪುಗೊಂಡಿದೆ. ಈ ಕಾದಂಬರಿಯ ಕಥಾನಾಯಕನಿಗೆ ಇಲ್ಲಿ ಹೆಸರೇ ಇಲ್ಲ. ಈತ ನಮ್ಮ ಯುವ ಸಮುದಾಯದ ನಡುವಿನ ಯಾರೊಬ್ಬನೂ ಆಗಬಹುದಾಗಿದ್ದು, ತನ್ನ ಅಸ್ತಿತ್ವಕ್ಕೆ ತಾನೇ ಜವಾಬ್ದಾರ ಎಂಬ ನಿಲುವಿಗೆ ಬರುತ್ತಾನೆ. ಪ್ರತಿಭಾವಂತನಾದ ಈ ಕಥಾನಾಯಕ ಮನಸ್ಸು ಮಾಡಿದ್ದರೆ ಏನನ್ನೂ ಸಾಧಿಸಬಹುದಿತ್ತು. ಆದರೆ ಅವನಲ್ಲಿ ಪ್ರತಿಭೆಯಿತ್ತು. ಆದರೆ ಸಾಧಿಸುವ ಛಲವಿರಲಿಲ್ಲ. ಗುರಿ ಮುಟ್ಟುವ ಮನಸ್ಸು ಮಾಡಲಿಲ್ಲ. ಆದ್ದರಿಂದ ತನ್ನ ಜೀವನವನ್ನು ತಾನೇ ಕೈಯ್ಯಾರೆ ಹಾಳುಮಾಡಿಕೊಳ್ಳುತ್ತಾನೆ.

ಈ ಕಾದಂಬರಿ ನವ್ಯ ಸಾಹಿತ್ಯದ ಹಣೆಪಟ್ಟಿಯಲ್ಲಿ ಹುಟ್ಟಿರುವ ಅನುಭವದ ಹಿನ್ನೆಲೆಯಿಂದ ರೂಪುಗೊಂಡ ಮನೋ ವಿಶ್ಲೇಷಣಾತ್ಮಕ ಕಾದಂಬರಿಯಾಗಿದ್ದರೂ, ಇದು ಎತ್ತುವ ಪ್ರಶ್ನೆಗಳು ಈ ಕಾಲಕ್ಕೂ ಪ್ರಸ್ತುತ ಮತ್ತು ಸಾರ್ವಕಾಲಿಕವಾದುದು ಎಂದು ಅವರು ಅಭಿಪ್ರಾಯ ಪಟ್ಟರು.

ಉಪನ್ಯಾಸದ ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ವಿಮರ್ಶಕ, ಪ್ರಾಧ್ಯಾಪಕ ಡಾ.ಬಿ.ಜನಾರ್ಧನ ಭಟ್, ಉದಯಕುಮಾರ್ ಹಬ್ಬು, ಮೋಹನದಾಸ್ ಕಡಂದಲೆ, ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕ ವಿಠಲ ಬೇಲಾಡಿ , ಲೇಖಕ ಅನು ಬೆಳ್ಳೆ ಮೊದಲಾದವರು ಭಾಗವಹಿಸಿದ್ದರು.

ಸಂಘದ ಕಾರ್ಯಾಧ್ಯಕ್ಷರಾದ ಡಾ.ನಾ.ಮೊಗಸಾಲೆ ಅಧ್ಯಕ್ಷತೆ ವಹಿಸಿ ಕಾದಂಬರಿ ನಾಲ್ಕನೆಯ ಆಯಾಮ ಮೌಲಿಕವಾದ ಕಾದಂಬರಿಯಾಗಿದ್ದು ಮರೆತು ಹೋಗಬಹುದಾದ ಸಾಧ್ಯತೆಯಲ್ಲಿ ಪೂರ್ಣಿಮಾ ಶೆಟ್ಟಿಯವರು ಅದನ್ನು ನುಡಿನಮನ ಕಾರ್ಯಕ್ರಮಕ್ಕೆ ಆರಿಸಿಕೊಂಡದ್ದು ಸೂಕ್ತವಾಗಿದೆ ಎಂದು ಕಾದಂಬರಿಯ ಹಿನ್ನೆಲೆಯಲ್ಲಿಯೂ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಪೂರ್ಣಿಮಾ ಸುಧಾಕರ ಶೆಟ್ಟಿ ಅವರನ್ನು ಕನ್ನಡ ಸಂಘದ ಶಾಶ್ವತ ಪ್ರಾಯೋಜಕರಾದ ಸಿ.ಕೆ.ಪಡಿವಾಳ್ ನೇತೃತ್ವದಲ್ಲಿ ಗೌರವಿಸಲಾಯಿತು. ನಾರಾವಿ ಬಾಬು ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು. ಬೇಲಾಡಿ ರಾಮಚಂದ್ರ ಆಚಾರ್ಯ ವಂದಿಸಿದರು.

# ನೇಸರು
## ತಿಂಗಳೋಲೆ

ಸಂಪುಟ 31 ಜುಲೈ 2014 ಸಂಚಿಕೆ 7



ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖



ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in


# "ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಲಾಗದು"

'ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಲಾಗದು' ಎಂಬ ಅಲ್ಲಮ ಪ್ರಭುವಿನ ಮಾತೊಂದಿದೆ. 'ನನಗೆ ಇವತ್ತಿನ ದಿನವೇ ಮುಖ್ಯ ನಿನ್ನೆ ನಾಳೆಗಳಲ್ಲ' ಎಂದು ನಾವು ಎಷ್ಟೇ ಕಿರುಚಿದರೂ ಮತ್ತೆ ನಾವು ಶರಣು ಹೋಗುವುದು ನಮ್ಮ ಭೂತಕಾಲಕ್ಕೆ. ವರ್ತಮಾನವೆನ್ನುವಂತದ್ದು ಭೂತಕಾಲದ ಅನೇಕ ಕ್ಷಣಗಳ ಕೊಂಡಿಯಾಗಿದೆ. ಕನ್ನಡ ಸಾಹಿತ್ಯಕ್ಕೆ ಅನ್ವಯಿಸಿ ಹೇಳುವುದಾದರೆ, ನಮಗೆ ಪಂಪನೂ ಬೇಡ, ಶೇಕ್ಸ್‌ಪಿಯರ್‌ನೂ ಬೇಡ ಎಂಬ ವಾದವೊಂದಿದೆ. ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತಿನ ಜನಾಂಗಕ್ಕೆ ನಮ್ಮ ಹಳೆಗನ್ನಡ ಕಾವ್ಯದ ಓದು ಯಾಕೆ ಬೇಕು? ಎನ್ನುವ ಪ್ರಶ್ನೆ ಕಾಡುತ್ತಿದೆ. ಹಳೆಗನ್ನಡ ಓದಲಿಕ್ಕೆ ಮತ್ತು ಅರ್ಥಮಾಡಿಕೊಳ್ಳಲು ಮಕ್ಕಳಿಗೆ ಕಷ್ಟವಾಗುವುದರಿಂದ ಅದನ್ನು ಪಠ್ಯಪುಸ್ತಕದಿಂದ ತೆಗೆದು ಹಾಕಬೇಕು ಎನ್ನುವ ವರ್ಗವೊಂದಿದೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಬಿಸಿ ಬಿಸಿ ಚರ್ಚೆ, ವಾಗ್ವಾದಗಳ ಝರಿಯೇ ಹರಿದಿದೆ. ಹಳೆಗನ್ನಡ ಅದು ಕಬ್ಬಿಣದ ಕಡಲೆ, ಅದು ಸಾಮಾನ್ಯರಿಗೆ ಅರ್ಥವಾಗದ ಭಾಷೆ. ಅದನ್ನು ಓದದದಿದ್ದರೂ ಕನ್ನಡ ಸಾಹಿತ್ಯವನ್ನು ಅರಿಯಬಹುದು ಎನ್ನುವ ಮನೋಭಾವ ಕೆಲವರಲ್ಲಿ ಪ್ರಬಲವಾಗಿ ಬೇರೂರಿದೆ. ಹಾಗಾದರೆ ನಮ್ಮ ವಿದ್ಯಾರ್ಥಿಗಳಿಗೆ ಕಷ್ಟವಿರುವುದು ಬೇಡವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕಷ್ಟವನ್ನು ಎದುರಿಸಲು ಸಾಮರ್ಥ್ಯವಿಲ್ಲದವರು ಸ್ಪರ್ಧಾತ್ಮಕ ಯುಗದಲ್ಲಿ ತಮ್ಮ ಮುಂದಿನ ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳುತ್ತಾರೆ? ನಮ್ಮ ದೇಹದ ಒಂದು ಅಂಗಕ್ಕೆ ನೋವಾಗಿದೆ ಎಂದು ನಾವು ಆ ಅಂಗವನ್ನೇ ಕತ್ತರಿಸಿ ಹಾಕುವುದಿಲ್ಲ ತಾನೇ? ಆ ನೋವಿಗೆ ಪರಿಹಾರವನ್ನು ಹುಡುಕುತ್ತೇವೆ. ಹಾಗೆ ಹಳೆಗನ್ನಡ ಸಾಹಿತ್ಯ ಯಾಕೆ ಕಠಿಣವಾಗುತ್ತಿದೆ ನಮ್ಮ ವಿದ್ಯಾರ್ಥಿಗಳಿಗೆ? ಅದರತ್ತ ತುಸು ಗಮನಹರಿಸಬೇಕು. ಹಳೆಗನ್ನಡವನ್ನು ಅಭ್ಯಸಿಸಲು ಬಹುಮುಖ್ಯವಾಗಿ ಬೇಕಾಗಿರೋದು ಆಸಕ್ತಿ. ಸ್ವಲ್ಪ ಶ್ರಮಪಟ್ಟರೆ ಅದು ಸುಲಲಿತವಾಗಿ ನಮ್ಮನ್ನು ಓದಿಸಿಕೊಂಡು ಹೋಗುತ್ತದೆ. ಪ್ರತಿ ಭಾಷೆಗೂ ಅದರದೇ ಆದ ಸಂರಚನೆ ಇದೆ. ಅದು ಯಾವ ಕಾಲಕ್ಕೂ ಬದಲಾಗುವುದಿಲ್ಲ.

ಹಳೆಗನ್ನಡವನ್ನು ಬಿಟ್ಟು, ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವಂತಿಲ್ಲ. ಹಳೆಗನ್ನಡ ಸಾಹಿತ್ಯ ನಮ್ಮ ಇಡಿ ಕನ್ನಡ ಸಾಹಿತ್ಯ ಚರಿತ್ರೆಯ ಭದ್ರಬುನಾದಿ ಇದ್ದಂತೆ. ಇಂದು ಹಳೆಗನ್ನಡವನ್ನು ಆಸಕ್ತಿಯಿಂದ ಓದುವ ವಿದ್ಯಾರ್ಥಿಗಳನ್ನು ಹುಡುಕುವುದು ಇರಲಿ ಅಧ್ಯಾಪಕರನ್ನು ಹುಡುಕುವುದು ಸಾಹಸದ ವಿಷಯ. ಯಾರೂ ಹುಟ್ಟುವಾಗಲೇ ಎಲ್ಲವನ್ನೂ ಕಲಿತುಕೊಂಡು ಬರುವುದಿಲ್ಲ. ಎಲ್ಲವನ್ನು ತಿಳಿದವರು ಎನ್ನುವ ಅಹಂಕಾರ ಬೇಡ. ಹಳೆಯದ್ದೆಂದು ಯಾವುದನ್ನೂ ಉಡಾಫೆ ಮಾಡುವಂತಿಲ್ಲ. ಹಳೆಯದಕ್ಕೆ ಹೊಸದರ ಮೆರುಗನ್ನು ಕೊಟ್ಟ ಮೇಲೆ ಹೊಸವಸ್ತು ನಿರ್ಮಾಣಗೊಳ್ಳುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ಹಳೆಯ ವಾಸ್ತುಶಿಲ್ಪವನ್ನು ನೋಡದೆ ಹೊಸದನ್ನು ಕಟ್ಟಲಿಕ್ಕೆ ಬರುತ್ತದೆಯೇ? ಇವತ್ತು ಹೊಸದಿರುವುದು ನಾಳೆ ಹಳೆತಾಗುತ್ತದೆ. ಪಂಪ ಬರೆಯುವ ಕಾಲಕ್ಕೆ ಅದು ಹೊಸಗನ್ನಡ. ನಮಗೆ ಈಗ ಅದು ಹಳೆಗನ್ನಡ. ನಾವು ಇವತ್ತು ಬರೆಯುತ್ತಿರುವ ಸಾಹಿತ್ಯ ಮುಂದಿನ ಪೀಳಿಗೆಯವರಿಗೆ ಹಳೆಗನ್ನಡವಾಗುತ್ತದೆ. ನನಗೆ ಈ ಸಂದರ್ಭದಲ್ಲಿ ಓ.ಎಲ್. ನಾಗಭೂಷಣ ಸ್ವಾಮಿ ಅವರು ಹೇಳಿದ ಮಾತು ನೆನಪಾಗುತ್ತದೆ "ಪರಂಪರೆಯನ್ನು ಜೀರ್ಣಿಸಿಕೊಂಡು ಹೊಸದನ್ನು ಬರೆಯಬೇಕು" . ಅವರ ಮಾತು ನಾವು ಸ್ವತಂತ್ರರು, ನಾವು ಯಾವುದೇ ಪರಂಪರೆಗೆ ಸೇರಿದವಲ್ಲ ಎನ್ನುವುವರಿಗೆ ತಣ್ಣಗೆ ಚಾಟಿ ಬೀಸಿದಂತಿದೆ. ವರ್ತಮಾನದಲ್ಲಿ ಭವಿಷ್ಯವೂ ಇದೆ ಹಳೆಗನ್ನಡ ಕಾವ್ಯದ ಸೊಗಡು ನಾವು ಇಂದು ಹೊಸಗನ್ನಡದಲ್ಲಿ ಕಾಣುವಂತಿಲ್ಲ. ಹಳೆಗನ್ನಡಕ್ಕೆ ಹಳೆಗನ್ನಡವೇ ಸರಿಸಾಟಿಯೆಂದು ಹೇಳಬಹುದು. ಸಾಹಿತ್ಯದಲ್ಲಿ ಪ್ರೀತಿ ಹುಟ್ಟಿಸಿದೇ ನಮ್ಮ ಹಳೆಗನ್ನಡ ಮಹಾಕಾವ್ಯಗಳು. ಹಳೆಗನ್ನಡ ಸಾಹಿತ್ಯಕ್ಕೆ ಸಾರ್ವಕಾಲಿಕ ಮಾನ್ಯತೆ ಇದೆ. ನಮ್ಮ ಹೆಚ್ಚಿನ ಕವಿಗಳು ತಮಗಿಂತ ಹಿಂದಿನ ಕಾವ್ಯ ಪರಂಪರೆಯೊಂದಿಗೆ ಸೃಜನಾತ್ಮಕ ಪ್ರತಿಕ್ರಿಯೆಯನ್ನು ಅತ್ಯಂತ ಪ್ರೀತಿ ಗೌರವಗಳ ಮೂಲಕ ತೋರುತ್ತಾ ಬಂದಿರುವುದನ್ನು ನಾವು ಗಮನಿಸಬಹುದು. ಹಳೆಗನ್ನಡ ಓದದೇ ಇರುವುದರಿಂದಲೇ ಇವತ್ತಿನ ಕಾವ್ಯಗಳು ಸೊರಗಿರುವುದನ್ನು ಕಾಣಬಹುದು. ಮಕ್ಕಳಲ್ಲಿ ಹಳೆಗನ್ನಡ ಬೇಡ ಅನ್ನುವ ಮನೋಭಾವ ಬೆಳೆಯಲಿಕ್ಕೆ ಕಾರಣ ನಮ್ಮ ಕೆಲವು ಶಿಕ್ಷಕರು. ಅವರು ಸರಿಯಾಗಿ ಹಳೆಗನ್ನಡವನ್ನು ಸರಿಯಾಗಿ ಬೋಧಿಸದ ಕಾರಣ, ಮಕ್ಕಳು ಹಳೆಗನ್ನಡವೆಂದರೆ ಸಾಕು ದೂರ ಸರಿಯುವಂತಾಗಿದೆ. "ಹಳೆಗನ್ನಡದಲ್ಲಿ ಅನುಭವ ಶ್ರೀಮಂತಿಕೆ ಇದೆ ಅದು ಪರಂಪರೆಯ ಜೀವಧಾತು ಇದ್ದಂತೆ. ಹಾಗಾಗಿ ಹಳೆಗನ್ನಡವನ್ನು ನಿರ್ಲಕ್ಷಿಸಿದರೆ ಆ ಪರಂಪರೆಯ ಶ್ರೀಮಂತ ಅನುಭವನ್ನು ಕಳೆದುಕೊಳ್ಳಬೇಕಾಗುತ್ತದೆ" ಎನ್ನುವ ಪ್ರೊ. ಎಂ. ಎಚ್. ಕೃಷ್ಣಯ್ಯ ಅವರ ಮಾತು ತಥ್ಯವಾದುದು. ಹಳೆಗನ್ನಡವನ್ನು ಪಠ್ಯಪುಸ್ತಕಗಳಿಂದ ತೆಗೆದು ಹಾಕಬೇಕು ಎಂಬ ವಿತಂಡ ವಾದ ಸರಿಯಲ್ಲ. ಹಳೆಗನ್ನಡ ಓದು ತುಂಬ ಸೊಗಸಾದದ್ದು. ಶಾಸ್ತ್ರೀಯ ಸಾಹಿತ್ಯ, ರಾಜಾಶ್ರಯ ಸಾಹಿತ್ಯ, ಹಳೆಗನ್ನಡ ಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯ, ನಡುಗನ್ನಡ ಸಾಹಿತ್ಯ ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ಬೆಳೆದುಬಂದ ಕನ್ನಡ ಸಾಹಿತ್ಯ ಹದಿನೆಂಟನೆಯ ಶತಮಾನದ ಅಂತ್ಯಕ್ಕೆ ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಸಾಹಿತ್ಯವಾಗಿ ಚಿಗುರೊಡೆಯಿತು. ಹಳೆಗನ್ನಡ ಓದುಗರನ್ನು ತನ್ನತ್ತ ಆಕರ್ಷಿಸಲು ವಿಫಲವಾಗಿದೆ ಎನ್ನುವಂತಿಲ್ಲ. ಅದನ್ನು ಇವತ್ತಿಗೂ ಮೆಚ್ಚಿ ಓದಿಕೊಂಡು ಗಮಕರೂಪದಲ್ಲಿ ಹಾಡುವ ಓದುಗರಿದ್ದಾರೆ. ಹಳೆಗನ್ನಡ ನನಗೆ ಅರ್ಥವೇ ಆಗುವುದಿಲ್ಲ ಎಂದು ಸತ್ಯಾಗ್ರಹ ಹೂಡಿ ಕೂರುವುದಲ್ಲ. ಜೊತೆಗೆ ಹಳೆಗನ್ನಡ ಅದಾಗಿಯೇ ಬಂದು ನನ್ನನ್ನು ಸೋಕಿ ಹೋದರೆ ಹೋಗಲಿ. ನಾನು ಮಾತ್ರ ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ ಎಂದು ಇದ್ದುಬಿಡುವುದಲ್ಲ. ಹಳೆಗನ್ನಡ ಸಾಹಿತ್ಯವೂ ಕೈಚಾಚಬೇಕು. ಕೈಚಾಚುತ್ತದೆ ಕೂಡ ಅದು ನಮ್ಮನ್ನು, ಜೊತೆಗೆ ಓದುಗನೂ ಕೈಚಾಚಬೇಕು. ಓದುಗನ ಅರಗಿಸಿಕೊಳ್ಳುವಿಕೆಗೂ, ಹಳೆಗನ್ನಡ ಸಾಹಿತ್ಯದ ಸಾರಕ್ಕೂ ಅನುಸಂಧಾನವಾಗಬೇಕು. ಆಗಷ್ಟೇ ಒಂದು ಸೌಹಾರ್ದಯುತವಾದ ಹೊಂದಾಣಿಕೆಯ ಜ್ಞಾನದ ಹಸ್ತಲಾಘವ ಸಾಧ್ಯ. ಕಷ್ಟವೆಂದು ಅದನ್ನು ಮತ್ತೂ ದೂರಸರಿಸಿದರೆ ಅದು ಇನ್ನಷ್ಟು ನಮ್ಮಿಂದ ದೂರಸರಿಯುತ್ತದೆ. ಹಳೆಗನ್ನಡ ಸಾಹಿತ್ಯ ಎನ್ನುವಂತದ್ದು ಕನ್ನಡ ಸಾಹಿತ್ಯ ಚರಿತ್ರೆವನ್ನು ಹೊಕ್ಕಲು ಇರುವ ಪ್ರವೇಶ ದ್ವಾರ. ಅದರಲ್ಲಿ ಮೊಗೆದಷ್ಟು ತೆಗೆಯಬಹುದಾದ ಸಾಹಿತ್ಯ ಭಂಡಾರವಿದೆ. ಹಾಗಾಗಿ ಹಳೆಗನ್ನಡವನ್ನು ಪಠ್ಯಕ್ರಮದಿಂದ ಕಿತ್ತುಹಾಕುವುದು ತರವಲ್ಲ.

**– ಡಾ. ಜ್ಯೋತಿ ಸತೀಶ್**


# ವರ್ಣ ಶ್ರಮಶ್ರುತಿಯ ಕಲಾವಿದ ದೇವದಾಸ ಶೆಟ್ಟಿ

✍ ಡಾ. ಜಿ. ಎನ್. ಉಪಾಧ್ಯ



ಮುಂಬಯಿ ವಾಣಿಜ್ಯ ನಗರವಷ್ಟೇ ಅಲ್ಲ. ಕಲೆ, ಸಾಹಿತ್ಯ ಬಹು ಸಂಸ್ಕೃತಿಗಳ ಸಂಗಮವೂ ಆಗಿದೆ. ಮುಂಬೈ ಮಹಾನಗರ ಅನೇಕ ಕಲಾವಿದರನ್ನು ರೂಪಿಸಿದೆ. ಕೆ.ಕೆ.ಹೆಬ್ಬಾರ್ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಪ್ರತಿಭಾವಂತ ಕಲಾವಿದ. ಈ ಸಾಲಿನಲ್ಲಿ ಕೇಳಿ ಬರುವ ಮುಂಬೈಯ ಇನ್ನೊಬ್ಬ ಕಲಾವಿದ ದೇವದಾಸ ಶೆಟ್ಟಿ. ಚಿತ್ರಕಲೆಯನ್ನು ಉಸಿರಾಗಿಸಿಕೊಂಡ ಅಪೂರ್ವ ಸೃಜನಶೀಲ ಕಲಾವಿದ ದೇವದಾಸ ಶೆಟ್ಟಿ ಅವರು ಅಪ್ಪಟ ಕನ್ನಡಿಗ . ತಮ್ಮನ್ನು ತಾವು ರೂಪಿಸಿಕೊಂಡ ದೇವದಾಸ ಶೆಟ್ಟಿ ಅವರು ಬದುಕಿನಲ್ಲಿ ಪಟ್ಟಪಾಡು, ಕಂಡುಂಡ ನೋವು ನಲಿವು ಅವರ ಕೈಯಲ್ಲಿ ಕಲೆಯಾಗಿ ಅಭಿವ್ಯಕ್ತಗೊಂಡಿವೆ. ನೂರಾರು ಚಿತ್ರ ಪ್ರದರ್ಶನಗಳ ಮೂಲಕ ಕಲಾವಿದರ ವಿಮರ್ಶಕರ ಮೆಚ್ಚುಗೆಗೆ ಪಾತ್ರರಾಗಿರುವ ಅವರು ಇಂದು ನಮ್ಮ ನಾಡಿನ ನಾಮಾಂಕಿತ ಕಲಾವಿದರಲ್ಲಿ ಒಬ್ಬರು ಎಂಬುದು ಹೆಮ್ಮೆಯ ಸಂಗತಿ. ಕಲಾಪ್ರಪಂಚದಲ್ಲಿ ತನ್ನದೇ ಆದ ಹಾದಿಯಲ್ಲಿ ಸಾಗಿ ಅನೇಕ ಸಂಘರ್ಷ ಸಂಕಷ್ಟಗಳ ನಡುವೆಯೂ ಸಾಧನೆಯ ಶಿಖರವೇರಿನಿಂತ ಪ್ರಬುದ್ಧ ಕಲಾವಿದ ದೇವದಾಸ ಶೆಟ್ಟಿ ಅವರ ಯಶೋಗಾಥೆ ಬಲು ರೋಚಕವಾಗಿದೆ.

ದೂರದ ಮುಂಬೈ ಮಹಾನಗರದಲ್ಲಿ ಅರಳಿದ ಪ್ರತಿಭೆ ದೇವದಾಸ ಶೆಟ್ಟಿ. ಅವರ ತಂದೆ ಮೂಲತ: ಮೂಡಬಿದಿರೆಯವರು. ಹೋಟೇಲು ಉದ್ಯಮದಲ್ಲಿ ಉಂಟಾದ ಹಠಾತ್ ಏರುಪೇರಿನಿಂದ ಬೀದಿಗೆ ಬಿದ್ದ ಕುಟುಂಬ ಅವರದು. ರಾತ್ರಿ ಶಾಲೆಯಲ್ಲಿ ಓದಿ ಬೆಳೆದ ಹುಡುಗ ಕಲಾವಿದನಾಗಿ ರೂಪುಗೊಂಡದ್ದು ಅಚ್ಚರಿಯ ಅಂಶ. ಬಡತನದಲ್ಲೇ ಬೆಳೆದ ಅವರು ಹೇಳಿಕೊಳ್ಳುವ ಯಾವುದೇ ತರಬೇತಿ ಪಡೆದ ಕಲಾವಿದರಾದವರಲ್ಲ. . ಒಂದರ್ಥದಲ್ಲಿ ಅವರು ಏಕಲವ್ಯನ ಹಾದಿಯಲ್ಲಿ ಸಾಗಿದವರು. ಔಷಧ ಕಂಪನಿಯೊಂದರಲ್ಲಿ ರಾತ್ರಿ ಪಾಳಿಯ ಕೆಲಸಕ್ಕೆ ಸೇರಿ ಜೀವನ ನಿರ್ವಹಣೆಗಾಗಿ ದುಡಿಯುತ್ತ ಹಗಲು ಹೊತ್ತು ಭಾವನೆಗಳಿಗೆ ಆಕಾರಕೊಡುತ್ತ ಬಣ್ಣ ಹಚ್ಚುತ್ತ ಬಂದ ಕಾರ್ಮಿಕ ಕಲಾವಿದ. ಕಲಾ ಶಾಲೆಯಲ್ಲಿ ತರಬೇತಿಗೆ ಸೇರಿಕೊಂಡರೂ ಅವರ ಪುಸ್ತಕದ ಬದನೆಕಾಯಿಯಿಂದ ಏನೂ ಉಪಯೋಗವಿಲ್ಲ ಎಂದರಿತು ಸುತ್ತಲಿನ ಬದುಕನ್ನು ನಿಸರ್ಗವನ್ನು ತೆರೆದ ಕಣ್ಣಿಂದ ನೋಡ ತೊಡಗಿದರು. ನಾಡಿನ ಬೇರುಗಳತ್ತ ಅಮೂರ್ತ ತುಡಿತ ಚಾಚಿತು. ಕುಷ್ಠರೋಗಿ, ಭ್ರೂಣಹತ್ಯೆ, ಸಂಗೀತ ಪರಿಕರದ ಕುರಿತ ಕೃತಿಗಳು, ಸಂಜೆಯ ಹಾಡು, ಹಳದಿ ಹೂ, ಭತ್ತ ಕುಟ್ಟುವ ಮಹಿಳೆ, ಮಹಿಳೆಯರ ಮೋರ್ಚಾ, ಗುಡ್ಡದ ಅಂಚಿನಲ್ಲಿ, ಬಸ್ತಾರ್‌ನ ಆದಿವಾಸಿಗಳು, ಯಕ್ಷಗಾನ, ಭೂತಾರಾಧನೆ ಹೀಗೆ ನೂರಾರು ಕೃತಿಗಳು ಕಲಾವಿದ ದೇವದಾಸರ ಪ್ರತಿಭೆ ಪರಿಶ್ರಮಕ್ಕೆ ಕನ್ನಡಿ ಹಿಡಿಯುತ್ತವೆ. ಅವರ ಕಲಾಕೃತಿಗಳ ವರ್ಣ ಸಂಯೋಜನೆ ಅಪೂರ್ವವೂ ಅದ್ಭುತವೂ ಆಗಿವೆ. ವ್ಯಾನ್ ಗೋನ ಕಲೆಗಾರಿಕೆಗೆ ಮರುಳಾದ ದೇವದಾಸ ಶೆಟ್ಟಿ ಅವರು ಅವನಿಂದ ಪ್ರಭಾವಿತ ರಾದರೂ ತಮ್ಮ ಸ್ವಂತಿಕೆಯನ್ನೂ ಛಾಪನ್ನೂ ಒತ್ತುವಲ್ಲಿ ಯಶಸ್ವಿ ಯಾಗಿದ್ದಾರೆ. ದಾದರ್‌ನ ಮೊಡೆಲ್ ಕಲಾಶಾಲೆ, ಜೆ. ಜೆ. ಕಲಾ ಶಾಲೆಯಲ್ಲಿ



ಕಲಾವಿದನಾಗಲು ಬೇಕಾದ ತರಬೇತಿಯನ್ನು ಪಡೆದು ಕೈತುಂಬಾ ಹಣ ಸಂಪಾದಿಸುವ ಅವಕಾಶಗಳಿದ್ದರೂ ಅದನ್ನೆಲ್ಲ ಬಿಟ್ಟು ಕಲಾತಪಸ್ವಿಯಾಗಿ ಉಳಿದು ಬಿಟ್ಟ ವಿರಳ ಕಲಾವಿದ ಅವರು. "ಕಲಾವಿದ ಕಲಾವಿದನಾಗಿ ವ್ಯಾಪಾರಿಯಾಗಬಾರದು. ಕಲೆಯ ಉಪಾಸಕನಾಗಬೇಕು. ಕಲಾಕೃತಿಗಳು ನಿಜವಾದ ಕಲಾಪ್ರಿಯರ ಸ್ವೊತ್ತಾಗಬೇಕು. ಅದು ಶ್ರೀಮಂತರ ಆಡಂಬರದ ವೈಭವದ ಪ್ರತಿಷ್ಠೆಯ ಸಂಕೇತವಾಗಿ ಬರೇ ಮಾರು ಕಟ್ಟೆಯ ಸರಕಾಗಬಾರದು. ಇಂದು ಕಲೆ ಉಳ್ಳವರ ಗೀಳಾಗಿರುವುದು ದೊಡ್ಡ ದುರಂತ. ಒಂದು ಒಳ್ಳೆಯ ಕಲಾಪ್ರದರ್ಶನ ಮಾಡಲು ಕಲಾವಿದ ಸಾಲಸೋಲ ಮಾಡಬೇಕಾಗಿದೆ. ಹೊಸ ಪ್ರೊಡಕ್ಟ್ ಲಾಂಚಿಂಗ ಹೆಸರಲ್ಲಿ ಲಕ್ಷಾಂತರ ರೂ ವ್ಯಯಿಸಬೇಕಾಗಿದೆ. ಕಲಾ ವಿಮರ್ಶಕರೂ ದುಬಾರಿಯಾಗಿದ್ದಾರೆ. ಹೀಗಾಗಿ ನಾನು ವ್ಯಾಪಾರ, ನಾಟಕ, ಗಿಮಿಕ್‌ಗಳಿಂದ ದೂರವಿದ್ದೇನೆ. ಕಲೆಯನ್ನು ಮೆಚ್ಚಿ ಕಲಾಕೃತಿಯನ್ನು ಕೊಂಡುಕೊಂಡರೆ ಕಲಾವಿದನ ಶ್ರಮ ಸಾರ್ಥಕ" ಎಂಬ ವಿನಮ್ರ ಭಾವ ದೇವದಾಸ ಶೆಟ್ಟಿ ಅವರದು.

ದೇವದಾಸ ಶೆಟ್ಟಿ ಅವರದು ಪ್ರಯೋಗಶೀಲ ಮನಸ್ಸು. ಜಲವರ್ಣ, ತೈಲವರ್ಣ, ಮ್ಯೂರಲ್ಸ್ ಪ್ರಯೋಗಗಳಲ್ಲಿ ಅವರು ಸಿದ್ಧಹಸ್ತರು. ಸಾಂದ್ರ ಫಲಕಗಳು ಅಥವಾ ಮಿನಿಯೇಚರ್, ಮ್ಯೂರಲ್ಸ್‌ನಲ್ಲಿಯೂ ಅವರು ತಮ್ಮ ಕಲೆಗಾರಿಕೆಯನ್ನು ಮೆರೆದಿದ್ದಾರೆ. ಚಿತ್ರಕಲೆಯನ್ನು ದೇವದಾಸ ಶೆಟ್ಟಿ ಅವರು ಉಪಜೀವನಕ್ಕೆ ಬಳಸಿಕೊಂಡವರಲ್ಲ. ಕಲೆಯ ಬಗೆಗೆ ಅಪಾರ ಗೌರವ, ಶ್ರದ್ಧೆಗಳಿರುವುದನ್ನು ನಾವು ಕಾಣಬಹುದು. ಸರಳ ಸಜ್ಜನಿಕೆಗೆ ಹೆಸರಾದ ದೇವದಾಸ ಶೆಟ್ಟಿ ಅವರ ಕೃತಿಗಳು ಬೌದ್ಧಿಕ ಗೊಂದಲವನ್ನು ಉಂಟುಮಾಡುವುದಿಲ್ಲ. ಅವರ ರೇಖೆಗಳು ಮಾತನಾಡುವ ಕಾವ್ಯಗಳೇ ಆಗಿವೆ. ಒಬ್ಬ ಸಂವೇದನಾಶೀಲ ಕಲಾವಿದನಾಗಿ ಸಾರ್ಥಕತೆಯೆನ್ನು ಅವರು ಪಡೆದುಕೊಂಡಿರುವುದು ಉಲ್ಲೇಖನೀಯ ಅಂಶ.

"ಕಲೆಯ ಬಯಲಲ್ಲಿ ನನ್ನದೇ ಆದ ಒಂದು ಕಾಲುದಾರಿಯಲ್ಲಿ ನಡೆದು ನನ್ನದೇ ಒಂದು ನಡಿಗೆಯನ್ನು ರೂಪಿಸಿಕೊಂಡಿದ್ದೇನೆ" ಎಂಬ ತೃಪ್ತಿ ಅವರಿಗಿದೆ. "ವ್ಯವಹಾರಿಕೆಯಿಂದ ಮನುಷ್ಯ ಮರಗಟ್ಟಿ ಹೋಗಿರುವಾಗ ಕಲಾಕೃತಿಯಲ್ಲೂ ಬೌದ್ಧಿಕ ಆಟಾಟೋಪ ಹೇರಿ ನೋಡುಗನ ಕಣ್ಣಿಗೆ ಬಣ್ಣ ಎರಚಿ ಮಂಕು ಕವಿಸುವ ಅತ್ಯಾಧುನಿಕ ಕಾಲವಿದು. ಆದರೆ ನಿಸರ್ಗದ ಮೂಲ ಭಾವಾನುರಾಗದ ಪಲ್ಲವಿಯನ್ನು ತನ್ನದೇ ಸರಳ ವರ್ಣ ಶೃತಿಯಲ್ಲಿ ಮೀಟಬಯುಸುವ ದೇವದಾಸರ ಕೃತಿಗಳು ತಮ್ಮ ಸರಳತೆಯಿಂದ ತೀವ್ರತೆಯಿಂದ ಸ್ಪಂದಿಸುವ ಕಳಕಳಿಯಿಂದ ಆಪ್ತವಾಗುತ್ತವೆ" ಎಂಬುದಾಗಿ ಸಾಹಿತಿ ಡಾ. ಜಯಂತ ಕಾಯ್ಕಿಣಿ ಅವರು ದೇವದಾಸ ಶೆಟ್ಟರ ಕಲಾನೈಪುಣ್ಯವನ್ನು ಸರಿಯಾಗಿ ಗುರುತಿಸಿದ್ದಾರೆ.

ಕಲಾವಿದ ದೇವದಾಸ ಶೆಟ್ಟಿ ಅವರು ತಮ್ಮ ಬಣ್ಣದ ಬದುಕನ್ನು ಓದುಗರೊಂದಿಗೆ ಹಂಚಿಕೊಳ್ಳುತ್ತಾ ಬಂದಿದ್ದಾರೆ. ಬದುಕು ಬಿಡಿಸಿದ ಚಿತ್ರಗಳು (೨೦೦೭) ನಾನು ಬಣ್ಣಗದ್ದಿದ ನನ್ನ ಜೀವನ ಕ್ಯಾನುವಾಸು(೨೦೧೩), ಅವರ ಪ್ರಕಟಿತ ಕನ್ನಡ ಕೃತಿಗಳು. ನಮ್ಮಲ್ಲಿ ಕಲಾಸಾಹಿತ್ಯ ಕಡಿಮೆ. ಕಲಾವಿದರ ಬರವಣಿಗೆ ನಡೆಸುವುದು ಅಪರೂಪ. ದೇವದಾಸ ಶೆಟ್ಟಿ ಅವರು ತಮ್ಮ ಕೃತಿಗಳಲ್ಲಿ ಅವರ ಜೀವನಗಾಥೆಯನ್ನು ಅನಾವರಣಗೊಳಿಸುತ್ತಾ ಬಂದಿರುವುದು ವಿಶೇಷ. ತಮ್ಮ ಅಂತರಂಗದ ತುಡಿತ, ನೋವು–ನಲಿವು, ಕಲಾ ಪ್ರಪಂಚದ ಸಾಮಯಿಕ ವಿದ್ಯಮಾನಗಳು, ಕಲಾವಿದನ ಕರ್ತವ್ಯ ನಿಷ್ಠೆ, ಕಲಾ ವಿಶೇಷ ಹೀಗೆ ನೂರಾರು ಸಂಗತಿಗಳನ್ನು ದೇವದಾಸ ಶೆಟ್ಟಿ ಅವರು ತಮ್ಮ ಕೃತಿಗಳಲ್ಲಿ ತೋಡಿಕೊಂಡಿದ್ದಾರೆ. ಇವು ಕಲಾ ಸಾಹಿತ್ಯಕ್ಕೆ ಮೌಲಿಕ ಕೊಡುಗೆಗಳಾಗಿವೆ.

ತಮ್ಮ ಚಿತ್ರಕಲೆಗಳ ಮೂಲಕ ದೇವದಾಸ ಶೆಟ್ಟಿ ಅವರು ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಭಾರತವಲ್ಲದೆ ಜರ್ಮನಿ, ಈಜಿಪ್ಟ್, ಅಮೆರಿಕಾ, ಲಂಡನ್, ದುಬೈ, ವೆಸ್ಟ್ ಇಂಡೀಸ್ ಮೊದಲಾದ ರಾಷ್ಟ್ರಗಳಲ್ಲಿಯೂ ಅವರ ಚಿತ್ರ ಪ್ರದರ್ಶನಗಳು ನಡೆದಿವೆ ಎಂಬುದು ಹೆಮ್ಮೆಯ ಸಂಗತಿ. ಕಲಾ ಲೋಕದಲ್ಲಿ ಸ್ವಶ್ರಮದಿಂದ ಅಪೂರ್ವ ಸಾಧನೆಗೈದ ಈ ಕಲಾವಿದನ್ನು ಕಲ್ಕತ್ತಾದಲ್ಲಿ 'ಶಾಂತಿನಿಕೇತನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಭಾರತೀಯ ಕಲಾ ಸಮಾಜ, ಆಳ್ವಾಸ್ ವರ್ಣ ವಿರಾಸತ್ ರಾಷ್ಟ್ರೀಯ ಪುರಸ್ಕಾರ ಮೊದಲಾದ ಮಾನಸಮ್ಮಾನಗಳು ಸಂದಿವೆ. ಕರ್ನಾಟಕ ಸರಕಾರ, ಅಕಾಡೆಮಿ ಇವರ ಸಾಧನೆಯನ್ನು ಗುರುತಿಸಿ ಗೌರವಿಸಬೇಕಾಗಿದೆ.

# ಜಗಜ್ಯೋತಿ ಬಸವಣ್ಣ

ಬಸವ ಬಸವಣ್ಣ ಬಸವೇಶ್ವರ
ಮಾದರಸ ಮಾದಲಾಂಬಿಕೆಯರ ಪ್ರೇಮದ ಕುವರ
ವಿಜಾಪುರದ ಬಾಗೇವಾಡಿಯಲಿ ಅವತರಿಸಿದ
ಜಾತಿ ಮತ ಭೇದವನು ಮೀರಿ ನಿಂತ
ಸತ್ಯ ಸದಾಚಾರಗಳ ನಿತ್ಯ ಪಾಲಿಸಿದನೀತ
ದಯೆಯೆ ಧರ್ಮದ ಮೂಲವೆಂದು ಸಾರಿಧಾತ
ಕಲಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಇದೇ ಅಂತರಂಗ ಶುದ್ಧಿ ಬಹಿರಂಗ ಶುದ್ಧಿಯೆಂದಾತ
ಕಲ್ಯಾಣದಲಿ ಅನುಭವ ಮಂಟಪ ತೆರೆದು
ಸಾಮಾನ್ಯರನ್ನು ಅಸಾಮಾನ್ಯರಾಗಿಸಿವನೀತ
ಮಹಿಳೆಯರಿಗೂ ಸಮಾನತೆಯ ಮಣೆ ನೀಡಿ
ಶಿವಶರಣೆಯನ್ನಾಗಿಸಿ ಧನ್ಯರನ್ನಾಗಿಸಿದ ಶರಣ ಶ್ರೇಷ್ಟ
ಆಡಂಬರದ ಪೂಜೆಯನ್ನು ದೂರವಿಟ್ಟು
ಶುದ್ಧ ಭಕ್ತಿ ದೇವರಿಗೆ ಪ್ರಿಯವಾದುದೆಂದು ತಿಳಿಸಿದಾತ
ಲೋಕ ಕಲ್ಯಾಣಕೆ ತನ್ನ ಬದುಕನ್ನೇ ಪಣಕಿಟ್ಟವನೀತ
ಸರ್ವರಿಗೂ ಸಮಬಾಳು ಸಮಪಾಲು ಎಂದವನು
ಕರ್ತವ್ಯವನೇ ಕೈಲಾಸವೆಂದು ನಂಬಿ ಬದುಕಿದವ
ಮಾನವನ ಬದುಕಿಗೆ ಬೆಳಕು ತೋರಿದಾತ
ಕನ್ನಡ ಭಾಷೆಯಲ್ಲೆ ಸಾಹಿತ್ಯ ರಚಿಸಿದಾತನೀತ
ಜಗಜ್ಯೋತಿ ಬಸವೇಶ್ವರ
ಬಸವ ಬಸವಣ್ಣ ಬಸವೇಶ್ವರ.



- ಡಾ. ಕರುಣಾಕರ್ ಎಸ್. ಶೆಟ್ಟಿ

# ಇಂದಿನ ರಾಜಕೀಯ



✍ ಶಾರದಾ ಎ. ಅಂಚನ್

ಹಣದ ದಾಹ ಅಧಿಕಾರದ ವ್ಯಾಮೋಹ
ಕೊಳೆಗೇರಿಯ ಗುಡಿಸಲಿಂದ
ಬಲು ಮಹಡಿಯ ಮಹಲಿನ ತನಕ
ಎಲ್ಲರಿಗೂ ತಲೆಬಾಗಿ
ನಂತರ ಮಾತ್ರ ತಿರುಗೇಟು ಕೊಟ್ಟು
ಸಿಕ್ಕ ಪಟ್ಟವ ಭದ್ರಗೊಳಿಸುವ ಹಣಾಹಣಿ
ಜಗದೆಲ್ಲ ಸುಖವ ಪಡೆವ ತರಾತುರಿ ||

ಹರಕು - ಮುರುಕು ಡೇರೆಯಡಿಯಲಿ
ಬಿರುಕು ಬಿಟ್ಟ ಪಾತ್ರೆಯ ತಳದಲ್ಲೊಂದಿಷ್ಟು
ಗಂಜಿ ಕುಡಿಯಲು ಹಸಿದ ಮಕ್ಕಳ ಕಾದಾಟ
ಯಾರಿಗೂ ಕಾಣದಿಲ್ಲಿ, ಎಳೆ ಕೂಸು ಹಸಿವ ತಾಳದೆ
ಬತ್ತಿಹೋದ ಸ್ತನದಲಿ ಹಾಲು ಹುಡುಕುತಲಿಹುದು
ಹರಿದ ಸೀರೆಯ ಉಯ್ಯಾಲೆಯಲಿ ಚೀರುತಿಹುದು
ದಾರಿದ್ರ್ಯದ ವೇದನೆ ಯಾರಿಗೆ ಬೇಕಿಲ್ಲಿ ? ||

ಚುನಾವಣೆಯ ಸಮಯದಲಿ
ಅಂದು ಒದ್ದು ಕೆಡವಿದ ವೃದ್ಧ ಹೆಂಗಸೂ
ತಾಯಿ ! ಅರಮನೆ- ಗುಡಿಸಲೆಲ್ಲವೂ ಒಂದೇ
ಬಿದ್ದು ತೆವಳುವ ಭಿಕ್ಷುಕನಿಗೂ
ಕೈ ಮುಗಿದು ಭದ್ರತೆಯ ಭರವಸೆಯಿಟ್ಟು
ಹಸಿ ಹಸಿ ನೋಟುಗಳ ಖುಷಿಗಾಗಿ ಚೆಲ್ಲಿ
ಜನರ ಅಮಾಯಕತೆಯ ಲಾಭ ಪಡೆದು
ಕೊಟ್ಟು- ತೆಗೆದುಕೊಳ್ಳುತಿರುವ ಆಟವಿಲ್ಲಿ ||

ದೇಶ ಸೇವೆಯ ನೆಪದಲ್ಲಿ
ಎಲ್ಲಿ ಬೇಕೆಂದರಲ್ಲಿ ಸೈಟು- ಫ್ಲ್ಯಾಟು
ಒಡಹುಟ್ಟಿದವರಿಗೆ ಸಂಬಂಧಿಗಳಿಗೆ
ಗಟ್ಟಿ ಕೆಲಸ, ಬದುಕಿಗೆ ಭದ್ರತೆ
ಬಡ ಜನರ ದುಡಿತ - ಫಲದ ಬಲದಲಿ
ಇವರ ಕುಟುಂಬಕ್ಕೂ ಆಶ್ರಯ- ಆಧಾರ
ನೂರು-ಸಾವಿರ ಲೆಕ್ಕವಿಲ್ಲ ಇಲ್ಲಿ
ಲೆಕ್ಕವೆಲ್ಲ ಲಕ್ಷ- ಕೋಟಿಗಳಲ್ಲಿ
ಭೂಗತ ಜಗತ್ತಿಗೂ ಒಡೆತನ
ಬಾಲಿವುಡ್‌ಗೂ ಹಿರಿಯಣ್ಣನ ಸ್ಥಾನ
ನಡೆವ ಧಗೆ - ದಂಗೆಗಳಿಗೆ ಬೆಂಗಾವಲಾಗಿ ನಿಂತು
ಬಿಳಿಯ ಜುಬ್ಬ- ಪೈಜಾಮ ಧರಿಸಿ
ದೇಶ ಮುನ್ನಡೆಸುವ ಹೊರೆಯ ಹೊತ್ತು
ಎದ್ದುಬಿದ್ದು ಬದುಕ ಗಾಲಿ ನೂಕುವ ಜನರ
ಅಸಹಾಯಕತೆಯ ಕಂಡೂ ನಿರ್ವಿಕಾರ-
ನಿರಾತಂಕ ಭಾವ !||

# ಕುಸುಮಾಕರ ದೇವರಗಣ್ಣೂರ ಅವರ 'ನಾಲ್ಕನೆಯ ಆಯಾಮ'

ಕನ್ನಡ ಸಾಹಿತ್ಯ ಲೋಕದಲ್ಲಿ ಕುಸುಮಾಕರ ದೇವರಗಣ್ಣೂರು ಅವರೊಂದು ಕುಸುಮವಿದ್ದಂತೆ. ಅವರು ಪ್ರಾಧ್ಯಾಪಕರಾಗಿ, ಕವಿಯಾಗಿ ಕಾದಂಬರಿಕಾರರಾಗಿ, ವಿಮರ್ಶಕರಾಗಿ, ಲೇಖಕರಾಗಿ, ಅನುವಾದಕರಾಗಿ ಜನಪ್ರಿಯರಾದವರು. ಕುಸುಮಾಕರ ದೇವರಗಣ್ಣೂರು ಕಾವ್ಯನಾಮ ಅವರ ಬರವಣಿಗೆಯ ಅಂಕಿತ. ವಸಂತ ಅನಂತ ದಿವಾಣಜಿ ಅವರ ನಾಮಧೇಯ. ಈ ಎರಡೂ ಹೆಸರುಗಳಿಂದ ಅವರು ಕನ್ನಡದಲ್ಲಿ ಸಾಹಿತ್ಯ ಸೃಷ್ಟಿಸಿದ್ದಾರೆ. ಕನ್ನಡಕ್ಕೆ ಹೊಸಬಗೆಯ ಕಾದಂಬರಿಗಳನ್ನು ನೀಡಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ನಿರಿಂದ್ರಿಯ, ಪರಿಘ,ಬಯಲು ಬಸಿರು ಅವರ ಹೆಸರಾಂತ ಕಾದಂಬರಿಗಳು. 'ಪ್ರಸಾದಯೋಗ' ಅವರ ಸಂಶೋಧನ ಮಹಾಪ್ರಬಂಧ. ಇದು ಪುರಂದರದಾಸರ ಜೀವನ ಸಾಧನೆಯ ಕುರಿತು ಬರೆದ ಮಹತ್ವದ ಶೋಧಗ್ರಂಥ.

ಕುಸುಮಾಕರರು 1930ರಲ್ಲಿ ವಿಜಾಪುರ ಜಿಲ್ಲೆಯ ದೇವರಗಣ್ಣೂರಿನಲ್ಲಿ ಜನಿಸಿದರು. ಕೆಳಮಧ್ಯಮ ವರ್ಗದ ಕುಟುಂಬದಲ್ಲಿ ಬೆಳೆದ ಅವರ ಆರಂಭದ ಶಿಕ್ಷಣ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆಯಿತು. ಈ ನಡುವೆ ಅವರ ತಂದೆಯವರು ಸೊಲ್ಲಾಪುರಕ್ಕೆ ಉದರ ನಿಮಿತ್ತವಾಗಿ ಬಂದರು. ಬಾಲಕ ವಸಂತ ಅವರು ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿಯೇ ಸೊಲ್ಲಾಪುರಕ್ಕೆ ಬರುವಂತಾಯಿತು. ಇಲ್ಲಿ ಯೋಗಾಯೋಗವೋ ಎಂಬಂತೆ ಬೇಂದ್ರೆಯವರ ಒಡನಾಟ ಸಿಕ್ಕಿತು. ಇಲ್ಲಿ ಸಾಹಿತ್ಯದ ಇಂಪು ಕಂಪಿನ ರುಚಿಶುದ್ಧಿ ಅವರಿಗಾಯಿತು. ಕಣ್ಣು–ಕಿವಿ ತೆರೆದು ಜಗತ್ತನ್ನು ನೋಡುವ ದೃಷ್ಟಿ ಕೊಟ್ಟವರು ಬೇಂದ್ರೆ ಎಂದು ದಿವಾಣಜಿ ಅವರು ಸದ್ಯೆವ ನೆನೆಯುತ್ತಿದ್ದರಂತೆ. 2012ರಲ್ಲಿ ದಿವಾಣಜಿ ಅವರು ನಿಧನರಾದರು.

ಕುಸುಮಾಕರರ ನಾಲ್ಕನೆಯ ಆಯಾಮ ಕಾದಂಬರಿ 1966ರಲ್ಲಿ ಬೆಳಕು ಕಂಡಿತು. ನಾಲ್ಕನೆಯ ಆಯಾಮ ಕಾದಂಬರಿ ಕನ್ನಡದ ಮೌಲಿಕ ಕಾದಂಬರಿಗಳಲ್ಲಿ ಒಂದೆಂದು ವಿಮರ್ಶಕರಿಂದ, ಓದುಗರಿಂದ ಮೆಚ್ಚುಗೆಯನ್ನು ಗಳಿಸಿದೆ. ಈ ಕಾದಂಬರಿ ಸ್ವಾತಂತ್ರ್ಯಾನಂತರದ ಯುವ ಪೀಳಿಗೆಯನ್ನು ಪ್ರತಿನಿಧಿಸುವ ಕಾದಂಬರಿಯಾಗಿದೆ. ಇದೊಂದು ಅತ್ತ್ಯುತ್ತಮ ನವ್ಯ ಕಾದಂಬರಿ. ಈ ಕಾದಂಬರಿಯ ನಾಯಕನಿಗೆ ಇಲ್ಲಿ ಹೆಸರು ಇಲ್ಲ. ಈತ ತನ್ನ ಜೀವನವನ್ನು ತಾನೇ ಕೈಯ್ಯಾರೆ ಹಾಳು ಮಾಡಿಕೊಳ್ಳುತ್ತಾನೆ. ಅವನು ಮೇಧಾವಿ, ಪ್ರತಿಭಾವಂತ. ಅವನಲ್ಲಿ ಪ್ರತಿಭೆಯಿತ್ತು. ಆದರೆ ನಿರ್ದಿಷ್ಟ ಗುರಿ ಇರಲಿಲ್ಲ. ಆ ಗುರಿಯನ್ನು ಮುಟ್ಟುವ ಛಲವಿರಲಿಲ್ಲ. ಏನನ್ನಾದರೂ ಸಾಧಿಸಬೇಕೆಂಬ ಛಲದಿಂದ ಮುನ್ನುಗ್ಗಲಿಲ್ಲ.

ಈ ಕಾದಂಬರಿಯ ಕುರಿತು ಡಾ. ಜಿ.ಎನ್.ಉಪಾಧ್ಯ ಅವರು ಈ ರೀತಿಯಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ಕಾದಂಬರಿ ಓದಿ ಮುಗಿಸಿದ ತಕ್ಷಣ ನಮಗೆ ಫ್ರೆಂಚ್ ಲೇಖಕ ಆಲ್ಬರ್ಟ್ ಕಾಮೂ ನ ಮಾತುಗಳು ನೆನಪಿಗೆ ಬರುತ್ತವೆ. ಮಾನವ ಏನಿದ್ದಾನೆ ಮತ್ತು ಏನು ಮಾಡುತ್ತಾನೆ ಎನ್ನುವುದು ಅವನ ವೈಯಕ್ತಿಕ ಹೊಣೆಗಾರಿಕೆ. ಮನುಷ್ಯನ ಅಸ್ತಿತ್ವದ ಹೊರಗಡೆ ಯಾವ ವಸ್ತು ಸತ್ಯವೂ ಇಲ್ಲ; ಅಥವಾ ಅವನ ಅಸ್ತಿತ್ವಕ್ಕೆ ಅಲೌಕಿಕವಾದುದಾವುದೂ ಕಾರಣವಲ್ಲ. ಅವನ ಬದುಕು ಸಂಪೂರ್ಣ ಅವನದೇ. ತಾನೇನೋ ಆಗಿರುವ ಮತ್ತು ಆಗುವ (ಬೀಯಿಂಗ್, ಬಿಕಮಿಂಗ್) ಸ್ವಾತಂತ್ರ್ಯ, ಜವಾಬ್ದಾರಿ ಅವನದೇ. ಪ್ರಸ್ತುತ ಕಾದಂಬರಿಯ ನಾಯಕನೂ ಅಂಥ ಮನೋಧರ್ಮದವನೇ. ಬದುಕಿನಲ್ಲಿ ಬಂಡೆದ್ದು ಜೀವನದ ಹೊಸ ಅನುಭೂತಿಯನ್ನು ಪಡೆಯಲು ಹೋಗಿ ಸೋತು ಸುಣ್ಣವಾಗುವ ಯುವಕನೊಬ್ಬನ ಜೀವನ ವೃತ್ತಾಂತವೇ ಈ ಕಾದಂಬರಿ.



✍ **ಪೂರ್ಣಿಮಾ ಎಸ್. ಶೆಟ್ಟಿ**

ಈ ಕಾದಂಬರಿಯಲ್ಲಿ ಎರಡು ವಿಧದ ಮಾನಸಿಕ ತೊಳಲಾಟವಿದೆ. ತಾಕಲಾಟವಿದೆ. ಒಂದು ಮಗನಿಗೆ ಒಂದು ಒಳ್ಳೆಯ ಕೆಲಸ ದೊರೆಯಬೇಕೆಂಬ ಇಚ್ಛೆಯಿಂದ ಮಗನ ಓದಿನ ಬಗ್ಗೆ ಸ್ವಲ್ಪ ಹೆಚ್ಚೇ ಅನಿಸುವಷ್ಟು ಕಟ್ಟುನಿಟ್ಟಿನ ನಿಯಮಗಳನ್ನು ಅವನ ಮೇಲೆ ಹೇರಿಸುತ್ತಿದ್ದ ತಂದೆ. ಹೆಚ್ಚು ಅಂಕ ತಾರದಿದ್ದಾಗ ನೀನು ಯಾವುದಕ್ಕೂ ಪ್ರಯೋಜನ ಇಲ್ಲದವನೆಂದು ಹೀಯಾಳಿಸುವುದು. ಇದರಿಂದ ಮನನೊಂದ ಮಗನಿಗೂ ತಾನು ಯಾವುದಕ್ಕೂ ಆಗದವನು, ನನ್ನಲ್ಲಿ ಧೈರ್ಯವಿಲ್ಲ ಎನ್ನುವ ಮನೋವೇದನೆ. ಇದೇ ಕಾರಣದಿಂದ ಮುಂದೆ ಅವನು ಜೀವನದಲ್ಲಿ ತಾನು ಹೇಡಿಯಲ್ಲ ಎಂಬುದನ್ನು ತೋರಿಸುವುದಕ್ಕಾಗಿ ಅವನ ಜೀವನಪಥವೇ ಬದಲಾಗುತ್ತದೆ. ಅವನ ಮನಸ್ಸು ಅಡ್ಡದಾರಿಯನ್ನು ಹಿಡಿಯುವಂತೆ ಪ್ರಚೋದಿಸುತ್ತದೆ. ಈ ಕಾದಂಬರಿಯನ್ನು ಓದುತ್ತಾ ಹೋದಂತೆ ಮಕ್ಕಳ ಮನಸ್ಸು ಹಸಿ ಮಣ್ಣಿನಂತೆ. ಅವರಲ್ಲಿ ಚಿಕ್ಕಂದಿನಲ್ಲಿಯೇ ನಾವು ಧೈರ್ಯವನ್ನು ತುಂಬಬೇಕೇ ಹೊರತು ಹೇಡಿತನವನ್ನಲ್ಲ ಎಂಬ ಸತ್ಯದ ಅರಿವಾಗುತ್ತದೆ. ಯಾಕೆಂದರೆ ಈ ಕಾದಂಬರಿಯ ನಾಯಕ ಬುದ್ಧಿವಂತ. ತನ್ನ ಬುದ್ಧಿವಂತಿಕೆಯನ್ನು ಆತ ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲ. ಇದಕ್ಕೆ ಅವನು ಎಷ್ಟು ಜವಾಬ್ದಾರಿಯೋ ಅಷ್ಟೇ ಹೊಣೆ ಹೊರಬೇಕಾದವರು ಅವನ ತಂದೆ ಹಾಗೂ ಅವನ ಸುತ್ತ ಮುತ್ತಲಿನ ಸಮಾಜ.

ಇಲ್ಲಿ ಕುಸುಮಾಕರ ದೇವಗಣ್ಣೂರ ಅವರು ಒಂದು ಪಾತ್ರವನ್ನು ಸೃಷ್ಟಿಸಿ ಆ ಕಥಾನಾಯಕನ ಮಾನಸಿಕ ತೊಳಲಾಟವನ್ನು ಬಹಳ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಆತ ಇತರರೊಂದಿಗೆ ಮಾತನಾಡುವುದಕ್ಕಿಂತ ತನ್ನ ಮನಸಿನೊಂದಿಗೆ ಹೆಚ್ಚು ಚರ್ಚೆ ಮಾಡುತ್ತಾನೆ. ಅ ಸನ್ನಿವೇಶವನ್ನು ಕಾದಂಬರಿಕಾರರು ಬಹಳ ಸೊಗಸಾಗಿ ವರ್ಣಿಸಿದ್ದಾರೆ. ಕಥಾ ನಾಯಕ ತನ್ನ ಮನಸನ್ನು ಕೈಯಲ್ಲಿ ಹಿಡಿದು ನೋಡುವುದು, ಅದು ಗ್ರಾಮಾಫೋನ್‌ನಂತೆ ಕಾಣುವುದು ಇವೆಲ್ಲ ಕಾದಂಬರಿಯನ್ನು ರಚಿಸುವಾಗ ಸಣ್ಣ ಪುಟ್ಟ ವಿಷಯಗಳನ್ನು ಓದುಗನ ಮನಮುಟ್ಟುವಂತೆ ಮಾಡುವ ನೈಪುಣ್ಯತೆಗೆ ಉತ್ತಮ ನಿದರ್ಶನ.

ಬೆಳೆಯುವ ಮಗನಿಗೆ ಯಾವುದೇ ರೀತಿಯ ಸ್ವಾತಂತ್ರ್ಯ ಕೊಡದೆ ಕೇವಲ ಓದುವಂತೆ ಕಿರಿಕಿರಿ ಮಾಡುವ ತಂದೆಯನ್ನು ವಯೋಸಹಜವಾಗಿ ಆತ ದ್ವೇಷಿಸುತ್ತಾನೆ. ಹಾಗೆಂದು ತನ್ನ ತಂದೆಯನ್ನು ಸಂಪೂರ್ಣವಾಗಿ ದ್ವೇಷಿಸಲಾರ. ತನ್ನ ಒಳಿತಿಗಾಗಿ ಅವರು ಹೇಳುವ ಮಾತುಗಳನ್ನು ಆತ ಗಮನದಲ್ಲಿರಿಸಿಕೊಂಡಿದ್ದಾನೆ. ತನ್ನ ತಂದೆಯ ಆ ರೀತಿಯ ವರ್ತನೆಗೆ ಆತ ತನ್ನದೇ ಆದ ಕಾರಣವನ್ನು ಕಂಡುಕೊಳ್ಳುತ್ತಾನೆ. ಅದು ತನ್ನ ತಂದೆ ಮೊದಲಿನಿಂದಲೂ ಹೀಗಿರಲಿಕ್ಕಿಲ್ಲ. ಯಾವುದೋ ಪರಿಸ್ಥಿತಿಯ ಒತ್ತಡದಿಂದ ತಂದೆಯ ಹೃದಯ ಹಲವು ದಿವ್ಯ ಕನಸುಗಳ ಗೋರಿಗಳಿಂದ ತುಂಬಿದ ರುದ್ರ ಭೂಮಿಯಾಗಿರಬೇಕು ಎಂದು ಆಲೋಚಿಸುವುದು ಆತನಿಗೆ ತಂದೆಯ ಮೇಲೆ ಮಮಕಾರ ಇತ್ತು ಎನ್ನುವುದನ್ನು ತೋರಿಸುತ್ತದೆ. ಇಂತಹ ಮೇರು ಮಟ್ಟದಲ್ಲಿ ಯೋಚಿಸಬಲ್ಲ ಆತ ಬಹುಶ: ಜೀವನದಲ್ಲಿ ಯಾವ ಮಟ್ಟವನ್ನು ಕೂಡಾ ಏರಬಹುದಾಗಿತ್ತು. ಆದರೆ ದುರಂತವೆಂದರೆ ಹಾಗಾಗಲಿಲ್ಲ. ಆತ ಆ ನಿಟ್ಟಿನಲ್ಲಿ ಪ್ರಯತ್ನಿಸಲೇ ಇಲ್ಲ.

ಕಥಾನಾಯಕ ಆಶಾವಾದಿ. ಅವನ ಜೀವನಶೈಲಿಯಲ್ಲಿ ಬದಲಾವಣೆ ತರಲು ಪ್ರಯತ್ನಿಸುತ್ತಾನೆ. ಆದರೆ ಅವೆಲ್ಲವನ್ನೂ ಪೂರೈಸಲು ಬೇಕಾದ ಹಣದ ಸಮಸ್ಯೆ. ಇತರರಂತೆ ತನ್ನ ಬಾಳ್ವೆಯಿಲ್ಲ. ಸದಾ ಬಡತನ. ಒಳ್ಳೆಯ ಬಟ್ಟೆ ಹಾಕಲು ಇಲ್ಲ. ಸಿನೆಮಾ ನೋಡುವ ಹಾಗಿಲ್ಲ ಎನ್ನುವ ಮನೋವೇದನೆ. ಅವನ ವಯಸ್ಸೇ ಹಾಗೆ. ಅವನಂತಹ ಎಲ್ಲ ಯುವಕರೂ ಬಯಸುವುದು ಇದನ್ನೇ. ಇತರರಂತೆ ತಾನೂ ಕಾಣಬೇಕು. ಜೀವನದಲ್ಲಿ ಎಲ್ಲಾ ಸುಖವನ್ನು ಅನುಭವಿಸಬೇಕು ಎಂಬ ಅದಮ್ಯ ಆಸೆ. ಅದು ಸಾಧ್ಯಾವಾಗದೇ ಇದ್ದಾಗ ತನ್ನ ಪಾಲಕರ ಸಮಸ್ಯೆಯ ಅರಿವಿದ್ದರೂ ಅವರ ಮೇಲೆ ಕೋಪ, ಅಸಹನೆ. ಇಲ್ಲಿಯೂ ಹೀಗೆ ನಾಯಕನಿಗೆ ತನ್ನ ಎಲ್ಲಾ ಆಸೆಗಳನ್ನು ಪೂರೈಸಲು ಆತನಿಗೆ ಹಣ ನೀಡದ ತಂದೆಯ ಮೇಲೆ ಅಸಹನೆ. ಅಸಾಹಯಕಳಾದ ತಾಯಿಯ ಮೇಲೆ ಪ್ರೀತಿಗಿಂತಲೂ ಅವನಿಗೆ ಕನಿಕರ ಜಾಸ್ತಿ. ತನ್ನ ತಾಯಿಯಲ್ಲಿ ಆತ ಹೇಳುವ ಮಾತು ಮನ ಕರಗಿಸುತ್ತದೆ. ಈ ಮನೆಯಲ್ಲಿ ಪ್ರೀತಿಯಷ್ಟೇ ಭಯವೂ ಅಧಿಕಾರವನ್ನು ವಹಿಸಿದೆ ಎನ್ನುತ್ತಾನೆ. ತಂದೆಯ ಅಧಿಕಾರದ ಭಯದ ನಡುವೆ ತಾಯಿಯ ಪ್ರೀತಿ ಅಡಗಿ ಹೋಗುವುದನ್ನು ನಾವು ಇಲ್ಲಿ ಕಾಣಬಹುದು. ಅಲ್ಲದೆ ಅವನ ಈ ಮಾತನ್ನು ನಾವು ಈ ರೀತಿಯಾಗಿಯೂ ಅರ್ಥೈಸಬಹುದು. ತಂದೆಯ ಅಧಿಕಾರದ ಹಿಂದೆ ಅವನಿಗೆ ತನ್ನ ಮಕ್ಕಳ ಮೇಲಿನ ಪ್ರೀತಿ ಕಾಳಜಿಯನ್ನೂ ಗುರುತಿಸಬಹುದು. ತನ್ನ ತಮ್ಮ–ತಂಗಿಯರ ಭವಿಷ್ಯದ ಕುರಿತು ಯೋಚಿಸುವ ನಾಯಕ ಅವರಿಗಾಗಿ ತಾನು ಏನಾದರೂ ಮಾಡಬೇಕೆಂದು ಹಪಹಪಿಸುತ್ತಾನೆ. ಆ ಇಚ್ಛೆಯಿಂದಲೇ ತಾನು ಓದಿ ನೌಕರಿ ಸೇರಬೇಕೆಂದು ಯೋಚಿಸುತ್ತಾನೆ. ತಂದೆಗೆ ಮಗ ರೈಲ್ವೇ ನೌಕರಿ ಹಿಡಿಯಬೇಕೆಂಬ ಆಸೆ. ನಾಯಕನಿಗೆ ತಾನು ಕಾಲೇಜು ಸೇರಿ ವಿದ್ಯಾಭ್ಯಾಸ ಮುಂದುವರಿಸಬೇಕೆಂಬ ಇಚ್ಛೆ. ಕೊನೆಗೂ ಕಾಡಿಬೇಡಿ ಕಾಲೇಜು ಸೇರಿಕೊಳ್ಳುತ್ತಾನೆ. ಕಾಲೇಜಿನಲ್ಲಿ ಆತ ಓದಿಗಿಂತ ಇತರ ವಿಷಯದ ಕಡೆಗೆ ಹೆಚ್ಚು ಗಮನ ಹರಿಸತೊಡಗುತ್ತಾನೆ. ಅವನದು ಹದಿಹರೆಯದ ವಯಸ್ಸು. ಈ ವಯಸ್ಸಿನಲ್ಲಿ ನಡೆಯುವ ಮಾನಸಿಕ ತುಮುಲಗಳನ್ನು ಕುಸುಮಾಕರ ದೇವರಗಣ್ಣೂರ ಅವರು ಒಬ್ಬ ಮಾನಸಿಕ ತಜ್ಞನಂತೆ ವಿಶ್ಲೇಷಿಸಿರುವುದು ಶ್ಲಾಘನೀಯ ಅಂಶ.

ಈ ಕಾದಂಬರಿಯಲ್ಲಿ ತಂದೆ ಹಾಗೂ ಮಗನ ಸ್ವಭಾದಲ್ಲಿ ಹೊಂದಾಣಿಕೆಯಿಲ್ಲ. ಇಬ್ಬರ ಸ್ವಭಾವದಲ್ಲೂ ಅಜಗಜಾಂತರ. ತಂದೆಗೆ ಮಗ ರೈಲ್ವೆಯಲ್ಲಿ ನೌಕರಿ ಹಿಡಿಯಬೇಕೆಂಬ ಆಸೆ. ಆದರೆ ನಾಯಕನಿಗಾದರೋ ತಾನು ವಿಜ್ಞಾನದ ವಿಷಯವನ್ನು ತೆಗೆದುಕೊಂಡು ಮೆಡಿಕಲ್ ಓದಬೇಕೆಂಬ ಆಸೆ. ಕಾಲೇಜಿಗೆ ಹೋಗಿ ಏನನ್ನೂ ಸಾಧಿಸಲಾಗದು ಎಂಬುದು ತಂದೆಯ ತರ್ಕ. ಕಥಾನಾಯಕನ ಮನಸ್ಸು ಚಂಚಲ. ಮೆಡಿಕಲ್ ಓದುವ ಇಚ್ಛೆಯಿದ್ದವನು ಮುಂದೆ ಸ್ನೇಹಿತನ ಮಾತಿಗೆ ಮರುಳಾಗಿ ವಿಜ್ಞಾನಿಯಾಗುವ ಕನಸು ಕಾಣುತ್ತಾನೆ. ಹ್ಯೂಮಾಸನ್, ಐನ್‌ಸ್ಟೀನ್, ಹಾಲ್ಡೇನ್, ಇವರು ಅವನ ಮಾನಸ ಕ್ಷಿತಿಜವನ್ನು ವಿಸ್ತರಿಸಿದ್ದಾರೆ. ತನ್ನ ವಿಜ್ಞಾನದ ಶೋಧಕ್ಕಾಗಿ ನೋಬೆಲ್ ಪಾರಿತೋಷಕವನ್ನು ಪಡೆಯುವ ಹೆಬ್ಬಯಕೆ ನಾಯಕನಿಗೆ. ಪದವಿಪೂರ್ವ ಪರೀಕ್ಷೆಯಲ್ಲಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣನಾದರೂ ತಂದೆಯದು ಅದೇ ರಾಗ. ರೈಲ್ವೇಯಲ್ಲಿ ನೌಕರಿ ಮಾತು. ಮತ್ತೆ ತಾಯಿಗೆ ಮೊರೆಹೋದ. ಮುಂದೆ ಓದಬೇಕು. ಆಗ ಮಾತ್ರ ತಾನು ಏನಾದರೂ ಸಾಧಿಸಬಹುದು ಎಂದು ಮೊದಲು ತಾಯಿಯ ಮನವೊಲಿಸುವ ಪ್ರಯತ್ನ ಮಾಡಿದ. ಹೆತ್ತ ಕರುಳು. ಎಂದಿಗೂ ಪತಿಗೆ ಎದುರಾಡದ ಆಕೆ ಮಗನಿಗಾಗಿ, ಅವನ ಮುಂದಿನ ವಿದ್ಯಾಭ್ಯಾಸಕ್ಕಾಗಿ ಪತಿಯೊಂದಿಗೆ ಹಠ ಹಿಡಿದಳು. ತಾಯಿ ಮಗನ ಪರ ತಂದೆಯೊಡನೆ ತನ್ನ ಗಟ್ಟಿ ನಿರ್ಧಾರ ತಿಳಿಸಿದಳು. ಹೆಂಡತಿಯ ಸ್ಥಿರತೆಯನ್ನು ಕಂಡು ನಾಯಕನ ತಂದೆ ಮೂಕವಿಸ್ಮಿತನಾದ. ಇಲ್ಲಿ ತಾಯಿಯ ಮಮತೆ ಮತ್ತೊಮ್ಮೆ ಗೆಲ್ಲುತ್ತದೆ. ತಾಯಿಯ ಹಟದೆದುರು ತಂದೆ ಸೋಲಬೇಕಾಯಿತು. ಕೊನೆಗೂ ಹಟ ಹಿಡಿದು ಕಾಲೇಜು ಸೇರಿದರೂ ಅಲ್ಲಿ ನಡೆಯುವ ಶೈಕ್ಷಣಿಕ ಪ್ರವಾಸಕ್ಕಾಗಲೀ, ನಗರದ ಯಾವುದೇ ಸಾಮಾನ್ಯ ಮನರಂಜನೆಗೂ ಹೋಗುವುದಕ್ಕೆ ಅವನಿಗೆ ಅನುಮತಿ ದೊರೆಯುವುದಿಲ್ಲ. ಕಾಲೇಜಿಗೆ ಸೇರಿಕೊಂಡ ಆತನ ಚಿತ್ತ ಮತ್ತೆ ಢೋಲಾಯಮಾನವಾಗುತ್ತದೆ. ಕಾಲೇಜಿನ ಅದರಲ್ಲೂ ವಿಜ್ಞಾನದ ವಿದ್ಯಾರ್ಥಿಗಳು ಬೆನ್ನ ಮೇಲೆ ಕೊಳೆಯ ಬಟ್ಟೆಗಳನ್ನು ಹೊತ್ತುಕೊಂಡು ಸಾಹುವ ಕತ್ತೆಗಳಾಗಿ ಕಾಣಿಸುತ್ತಾರೆ. ಕಾಲೇಜಿಗೆ ಸೇರಿಕೊಂಡ ನಂತರದ ದಿನಗಳನ್ನು, ವಿದ್ಯಾರ್ಥಿಗಳ ಮನಸ್ಥಿತಿಯನ್ನು, ವಿದ್ಯಾರ್ಥಿ ಜೀವನದ ವಿವಿಧ ಸಮಸ್ಯೆಗಳನ್ನು ಕಾದಂಬರಿಕಾರರು ಇಲ್ಲಿ ಬಹಳ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಈ ಎಲ್ಲಾ ಚಿತ್ರಣಗಳು ಒಬ್ಬ ಕಥಾ ನಾಯಕನದ್ದಲ್ಲ. ನಮ್ಮ ದೇಶದ ಸಮಸ್ಯೆ. ನಮ್ಮ ವಿದ್ಯಾರ್ಥಿಗಳ ಮನಸ್ಸಿನ ತುಮುಲಗಳ ಜ್ವಲಂತ ನಿದರ್ಶನಗಳನ್ನು ಕಥೆಯಾಗಿ ಹೆಣೆದಿರುವುದು ಕಾದಂಬರಿಯ ವೈಶಿಷ್ಟ್ಯ.

ಕಥಾನಾಯಕನಿಗೆ ಹದಿಹರೆಯದ ಉತ್ಸಾಹ. ತಾನು ಎಲ್ಲರಂತೆ ಕಾಣಬೇಕೆಂಬ ಆಸೆ. ಅದಕ್ಕಾಗಿ ಆ ಊರಿನಲ್ಲಿರುವ ಬೆಲೆಬಾಳುವ ರಾಯಲ್ ಹೇರ್ ಕಟ್ಟಿಂಗ್ ಸೆಲೂನಿನಲ್ಲಿ ಕಟ್ಟಿಂಗ್ ಮಾಡಿಸಿಕೊಳ್ಳುವ ಇಚ್ಛೆ. ಹೊಸ ಹೊಸ ಸಿನೆಮಾ ನೋಡಬೇಕೆಂಬ ಬಯಕೆ. ಹೆಣ್ಣು ಮಕ್ಕಳನ್ನು ಕದ್ದು ಮುಚ್ಚಿ ನೋಡುವ ಇಚ್ಛೆ. ಇದೆಲ್ಲಕ್ಕೆ ಅಡ್ಡಿ ಪಡಿಸುತ್ತಿರುವ ತಂದೆ ತನ್ನ ಭಾವನೆಗಳನ್ನು ಅರ್ಥಮಾಡಿ ಕೊಳ್ಳುತ್ತಿಲ್ಲ ಎಂಬ ಆರೋಪ.

ತಾನು ಇತರ ವಿದ್ಯಾರ್ಥಿಗಳಿಗಿಂತ ಭಿನ್ನ ಎಂದು ತೋರಿಸುಕೊಳ್ಳುವ ತವಕ ನಾಯಕನಿಗೆ. ತನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕೆಂಬ ಬಯಕೆ. ಈ ಹಂಬಲವೇ ಶಿಕ್ಷಕನಿಂದ ಅಪಮಾನಕ್ಕೆ ಒಳಗಾಗುವಂತೆ ಮಾಡುತ್ತದೆ. . 'ಭೆಂಡಿ ಆಟದಲ್ಲಿ ಶಹಬ್ಬಾಸ್ ಗಿರಿಯನ್ನು ಅಪೇಕ್ಷಿಸಿದ್ದ ಆತನಿಗೆ ಅಲ್ಲಿ ದೊರೆಯುವುದು ಬರೇ ಅವಮಾನ. ಇಲ್ಲಿಯೂ ಅವನು ನೋವು ಅನುಭವಿಸಬೇಕಾಗುತ್ತದೆ. ಇದರಿಂದ ತಾನು ಸ್ವತಂತ್ರವಾಗಿ ಬದುಕುವ ನಿರ್ಧಾರಕ್ಕೆ ಬರುತ್ತಾನೆ. ಮನೆಯಿಂದ ಹೊರಬಂದು ಕಾಲೇಜಿಗೆ ಹತ್ತಿರವಿರುವ ತನ್ನ ತಾಯಿಯ ಸ್ನೇಹಿತೆಯ ಮನೆಯಲ್ಲಿ ಉಳಿಯಲು ಅವಕಾಶ ದೊರೆತರೂ ಅವಳ ಮಗಳನ್ನು ಕಂಡು ಕೆಟ್ಟ ದೃಷ್ಟಿಯಿಂದ ನೋಡುವುದು. ಸಿಗರೇಟು ಸೇದುವ ಬಯಕೆ ಮುಂತಾದ ಕೆಟ್ಟ ಚಾಳಿಗಳಿಗೆ ಅವನ ಮನ ಬಲು ಬೇಗನೇ ಸೋಲುತಿತ್ತು. ವಯೋಸಹಜವಾದ ಹೆಣ್ಣಿನ ಆಕರ್ಷಣೆ, ತನಗೆ ಒಲಿಯದ ಆಕೆ ಶ್ರೀಮಂತಳು. ತಾನು ಬಡವನೆಂದು ಅಸಡ್ಡೆ ಮಾಡುತ್ತಿದ್ದಾಳೆ ಎಂದು ತನ್ನ ಪರಿಸ್ಥಿತಿಗೆ ತಾನೇ ತಾತ್ಸಾರ ಪಟ್ಟುಕೊಳ್ಳುವುದು ಇವೆಲ್ಲ ಆತನ ದುರ್ಬಲ ಮನಸ್ಸಿನ ಸ್ಥಿತಿಗಳು.

ಅವನು ಬುದ್ಧಿವಂತ. ವಿಜ್ಞಾನ ಓದಲು ಬಂದ ಆತ ತನ್ನ ಬುದ್ಧಿವಂತಿಕೆಯನ್ನು ತನ್ನ ಓದು, ಅಭ್ಯಾಸಕ್ಕಾಗಿ ಮೀಸಲಾಗಿಟ್ಟಿದ್ದರೆ ಅವನಷ್ಟು ಪ್ರತಿಭಾವಂತ ವಿದ್ಯಾರ್ಥಿಗಳೇ ಇರುತ್ತಿರಲಿಲ್ಲ. ಯಾಕೆಂದರೆ ಅವನಲ್ಲಿ ಅಂತಹ ಬುದ್ಧಿ ಇತ್ತು, ಚಾಣಾಕ್ಷತೆ ಇತ್ತು. ಉತ್ಸಾಹವಿತ್ತು. ಕಾಲೇಜು ಸೇರಿದ ನಂತರವೂ ಆತ ಹತ್ತು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಅವನಿಗೆ ಪರಿಚಯವಾದ ತರುಣನ ಭವ್ಯ ನಿಲುವಿಗೆ ಆಕರ್ಷಿತನಾಗಿ ಅವನನ್ನು ಸ್ನೇಹಿತನನ್ನಾಗಿ ಸ್ವೀಕರಿಸುತ್ತಾನೆ. ಹಳ್ಳಿಯಿಂದ ಬಂದಿದ್ದರೂ ಆತನಲ್ಲಿ ಅಚಲ ನಿರ್ಧಾರವಿತ್ತು. ಅವನ ಮುಂದೆ ಗುರಿಯಿತ್ತು. ಅದೇ ಸಿದ್ಧಿ ಇಲ್ಲವೇ ಮೃತ್ಯು. ಅವನಿಂದ ಆತ ಕಲಿತ ಪಾಠ ಎಂದರೆ ಜೀವನಕ್ಕೊಂದು ಉದ್ದೇಶವಿರಬೇಕು. ಬರೀ ಹೊಟ್ಟೆ ತುಂಬಿಸಿಕೊಳ್ಳುವುದೊಂದೇ ಜೀವನದ ಉದ್ದೇಶವಲ್ಲ. ಸೃಷ್ಟಿಯ ರಹಸ್ಯಗಳನ್ನು ಭೇಧಿಸಿ ಲೋಕಜೀವನವನ್ನು ಸಮೃದ್ಧಗೊಳಿಸುವುದರಲ್ಲಿ ಎಂತಹ ಶ್ರೇಷ್ಠತೆ ಇದೆ. ಕೊನೆಗೆ ಆತ ತನ್ನ ತಂದೆಯನ್ನು ಪ್ರೀತಿಸುವುದರಲ್ಲಿ ತನ್ನ ವ್ಯಕ್ತಿತ್ವದ ಧೀರೋದಾತ್ತತೆಯಿದೆ ಎಂದು ಭಾವಿಸುತ್ತಾನೆ. ಇಂದಲ್ಲ ನಾಳೆ ನಾನು

ಕೂಡಾ ನನ್ನ ಸ್ನೇಹಿತನಂತೆ ಆಗಬೇಕು ಎಂದು ಆಶಿಸುತ್ತಾನೆ. ಅಂತಹ ಉತ್ತಮ ಸ್ನೇಹಿತ ತನ್ನಿಂದ ದೂರವಾಗುವ ಸಂದರ್ಭದಲ್ಲಿ ತುಂಬಾ ದು:ಖಿತನಾಗುತ್ತಾನೆ.

ಈ ನಡುವೆ ತನಗೆ ದೊರೆತ ಮತ್ತೊಬ್ಬ ಸ್ನೇಹಿತನ ಬಡತನದಲ್ಲೂ ಸುಖಿಯಾಗಿರುವ ಮನೋಸ್ಥಿತಿಗೆ ಮಾರುಹೋಗುತ್ತಾನೆ. ಇಬ್ಬರ ಪರಿಸ್ಥಿತಿಯೂ ಒಂದೇ. ಬಡತನ. ಆದರೆ ಆತ ಅರಳಿದ ಹೂ ಆದರೆ ತಾನು ಕೊಳೆಯಾಗಿದ್ದೇನೆ ಎಂದು ಭಾವಿಸುತ್ತಾನೆ. ಈ ತುಲನೆ ಮನುಷ್ಯ ತನ್ನ ಜೀವನವನ್ನು ಸ್ವೀಕರಿಸುವ ರೀತಿಯಲ್ಲಿಯೇ ಅವನ ಸುಖ ದು:ಖಗಳು ಅಡಗಿವೆ ಎಂಬುದನ್ನು ಕಾದಂಬರಿಯಲ್ಲಿ ಸೊಗಸಾಗಿ ವರ್ಣಿಸಿದ್ದಾರೆ. ಈ ಕಾದಂಬರಿ ಒಂದು ವಿಧ'ದಲ್ಲಿ ಮನೋವೈಜ್ಞಾನಿಕ ವಿಷಯಗಳನ್ನು ಹೊಂದಿದ ಕಥಾವಸ್ತುಗಳು ನಮಗೆ ಢಾಳಾಗಿ ಕಾಣ ಸಿಗುತ್ತವೆ. ಇಲ್ಲಿ ಕಥಾನಾಯಕನಿಗೆ ಬೀಳುವ ಚಿತ್ರ ವಿಚಿತ್ರ ಕನಸುಗಳು ಅವನ ಮನಸ್ಥಿತಿಯ ಚಿತ್ರಣವನ್ನು ನೀಡುತ್ತವೆ. ಅವನ ಕನಸಿನಲ್ಲಿ ಸ್ನೇಹಿತ ಬಂದು ಹೇಳುವ ಶ್ರೇಯಸ್ಸು ಪ್ರೇಯಸ್ಸು ಎಂದು ಎರಡಿವೆ. ಬುದ್ಧಿಹೀನರು ಪ್ರೇಯಸ್ಸನ್ನು ಆರಿಸಿದರೆ ಬುದ್ಧಿವಂತರು ಶ್ರೇಯಸ್ಸನ್ನು ಆರಿಸುತ್ತಾರೆ. ನಾವು ಶ್ರೇಯಸ್ಸನ್ನು ಆರಿಸಿಕೊಳ್ಳಬೇಕು ಎಂಬ ಮಾತು ಅವನ ಮನಸ್ಸನ್ನು ಹಗುರವಾಗಿಸುತ್ತಿತ್ತು. ಆ ಮಾತುಗಳು ಅವನಲ್ಲಿ ಪ್ರೇರಣೆಯನ್ನು ತುಂಬುತ್ತಿದ್ದವು. ತಾನೂ ಬದಲಾಗಬೇಕು. ತನ್ನ ತಂದೆಯನ್ನು ಪ್ರೀತಿಸಬೇಕು ಎಂಬ ಭಾವನೆ ಬಂದರೂ ಮತ್ತೆ ತಂದೆಯ ಮೇಲಿನ ಕೋಪ ಭುಗಿಲೇಳುತ್ತಿತ್ತು. ಅವನಿಂದಲೇ ನನ್ನ ಬದುಕು ಈ ರೀತಿಯಾಯಿತು ಎಂಬುವುದು ಅವನ ವಾದ.

ಈ ಎಲ್ಲಾ ಒಳ್ಳೆಯ ಮಾತುಗಳು ಕೇವಲ ಕೆಲವೇ ಸಮಯ. ಆತ ತನ್ನ ದೌರ್ಬಲ್ಯಕ್ಕೆ ಸಮಾಜ ಕಾರಣ ಎಂದು ದೂಷಿಸುತ್ತಾನೆ. ದುನಿಯಾ ಗಲತಿಯೋಂಕಾ ಹಸೀನ ಜಾಲಹೈ ಎಂಬ ಸಿನಿಮಾ ನಾಯಕನ ಮಾತನ್ನು ಸಮರ್ಥಿಸುತ್ತಾನೆ. ಜೀವನದಲ್ಲಿ ಕೇವಲ ಮಜಾ ಮಾಡಬೇಕೆಂಬ ಉದ್ದೇಶದಿಂದ ಅವನು ಕಾಲೇಜಿನಲ್ಲಿ ಮಾಡಬಾರದ ಕಾರುಬಾರುಗಳನ್ನು ಮಾಡುತ್ತಾನೆ. ಆದರೆ ಎಲ್ಲಿಯೂ ಆತನಿಗೆ ಯಶಸ್ಸು ದೊರೆಯುವುದಿಲ್ಲ. ಓದು, ಪರೀಕ್ಷೆ ಯಾವುದರ ಕಡೆಯೂ ಆತನಿಗೆ ಗಮನವಿಲ್ಲ. ಇದರಿಂದಾಗಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗುತ್ತಾನೆ. ಜೀವನ ನಿರ್ವಹಣೆಗಾಗಿ ಏನಾದರೊಂದು ಉದ್ಯೋಗ ಮಾಡಬೇಕೆಂದು ಪ್ರಯತ್ನಿಸುತ್ತಾನೆ. ಕೆಟ್ಟ ಮೇಲೆ ಬುದ್ಧಿ ಬಂತು ಎಂಬ ಮಾತಿನಂತೆ ಎಷ್ಟೋ ಅವಕಾಶಗಳಿದ್ದರೂ ಅದಕ್ಕೆ ತಾನು ಅರ್ಹನಲ್ಲ ಎಂದು ಕೊರಗುವ ಆತ ಇದಕ್ಕೆಲ್ಲ ಕಾರಣ ತನ್ನ ತಂದೆ ತಾಯಿ, ಸ್ನೇಹಿತರು ಕಾರಣವೆಂದು ಭಾವಿಸುತ್ತಾನೆ. ಚಹಾ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ ಆತ ಸ್ವತಂತ್ರವಾಗಿ ಜೀವಿಸುವ ಪ್ರಯತ್ನ ಮಾಡುತ್ತಾನೆ. ತನ್ನ ಎಲ್ಲ ಇಚ್ಛೆಗಳನ್ನು ಪೂರೈಸತೊಡಗುತ್ತಾನೆ. ಇದುವರೆಗೂ ಆತನನ್ನು ಕಾಡುತ್ತಿದ್ದ ಲೈಂಗಿಕ ತೃಷೆಯನ್ನು ತೀರಿಸುವುದಕ್ಕಾಗಿ ಆತ ಧೈರ್ಯ ಮಾಡಿ ವೇಶ್ಯಾಸಂಗವನ್ನೂ ಮಾಡುತ್ತಾನೆ. ನಂತರ ಪಶ್ಚಾತ್ತಾಪದಿಂದ ಕೊರಗುತ್ತಾನೆ. ತನ್ನ ತಂದೆಯವರು ಒಳ್ಳೆಯವರು.ನಾನೇ ಕೆಟ್ಟವನೆಂದು ಕಣ್ಣೀರು ಸುರಿಸುತ್ತಾನೆ. ಸ್ನೇಹಿತನಂತೆ ನಾನೂ ಆಗಬಹುದಿತ್ತು ಎಂದು ಮಿಂಚಿಹೋದ ಕಾರ್ಯಕ್ಕೆ ಹಲುಬುತ್ತಾನೆ. ತಾನು ವೇಶ್ಯಾಸಂಗ ಮಾಡಿದ್ದರಿಂದ ತನಗೆ ಸಿಫ್‌ಲಿಸಿನ ಕಾಯಿಲೆ ಇದೆ ಎಂದು ಕಲ್ಪಿಸಿಕೊಂಡು ಭಯಗ್ರಸ್ತನಾಗುತ್ತಾನೆ. ಅದೇ ಭಯದಿಂದ ಕೊರಗಿ ಕೊರಗಿ ಸ್ಮೃತಿತಪ್ಪಿ ಬಿದ್ದು ಆಸ್ಪತ್ರೆ ಸೇರುತ್ತಾನೆ. ಅಲ್ಲಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಈ ಕಾದಂಬರಿಯಲ್ಲಿ ಸಮಾಜಕ್ಕೆ ಸ್ವಾಸ್ಥ ಮಕ್ಕಳನ್ನು ನೀಡುವುದು ಪಾಲಕರ ಕರ್ತವ್ಯ. ಅತಿಯಾದ ಒತ್ತಡ ಮಕ್ಕಳಲ್ಲಿ ಆತ್ಮವಿಶ್ವಾಸದ ಕೊರತೆಯನ್ನು ಮಾಡುತ್ತದೆ. ಅವರಲ್ಲಿ ಎಳವೆಯಲ್ಲಿಯೇ ಸ್ಫೂರ್ತಿ ನೀಡಿ ಬೆಳೆಸಬೇಕು ಎಂಬೆಲ್ಲ ವಿಚಾರಗಳನ್ನು ಕುಸುಮಾಕರರು ಬಹಳ ಸೊಗಸಾಗಿ ಮನಮುಟ್ಟುವಂತೆ ವರ್ಣಿಸಿದ್ದಾರೆ. ಹದಿಹರೆಯದ ಮಕ್ಕಳ ಮನಸ್ಸಿನ ಸ್ಥಿತಿ, ಇಂದಿನ ಶಾಲಾಕಾಲೇಜುಗಳ ಸ್ಥಿತಿಗತಿ, ಉತ್ತಮ ಮಕ್ಕಳ ನಿರ್ಮಾಣದಲ್ಲಿ ಸಮಾಜದ ಕೊಡುಗೆ ಈ ಎಲ್ಲಾ ಸೂಕ್ಷ್ಮ ವಿಷಯಗಳ ಕುರಿತು ಈ ಕಾದಂಬರಿಯಲ್ಲಿ ಬೆಳಕು ಚೆಲ್ಲಲಾಗಿದೆ.

ಇತರ ಕಾದಂಬರಿಗಳಿಗಿಂತ ಭಿನ್ನ ವಿಷಯವನ್ನು ಆರಿಸಿಕೊಂಡು ವಿಭಿನ್ನವಾಗಿ ಕಥೆ ಹೆಣೆದ ಶ್ರೇಯಸ್ಸು ಕುಸುಮಾಕರ ದೇವರಗಣ್ಣೂರ ಅವರಿಗೆ ಸಲ್ಲುತ್ತದೆ. ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ನೌಕರಿಗಾಗಿ ಓದಿಸುವ ಎಲ್ಲ ಪಾಲಕರಿಗೆ ಇಲ್ಲಿ ಕುಸುಮಾಕರರು ಒಳ್ಳೆಯ ಸಂದೇಶವನ್ನು ನೀಡಿದ್ದಾರೆ. ಇಲ್ಲಿನ ಕಥಾನಾಯಕ ಪ್ರತಿಭಾವಂತನಾದರೂ ಅವನಿಗೆ ಸರಿಯಾದ ಮಾರ್ಗದರ್ಶನವಿಲ್ಲದೆ, ಆತ್ಮಸ್ಥೈರ್ಯ ತುಂಬುವವರಿಲ್ಲದೆ ಅರಳಿ ಸುವಾಸನೆ ಬೀರಬೇಕಾದ ಹೂವೊಂದು ಮುರುಟಿ ಹೋಗುವ ದಾರುಣ ಚಿತ್ರಣವಿರುವ ನಾಲ್ಕನೆಯ ಆಯಾಮ ಕಾದಂಬರಿ ವಿಶಿಷ್ಟವಾಗಿದ್ದು ಕಾದಂಬರಿಲೋಕಕ್ಕೆ ಹೊಸತನ್ನು ನೀಡಿದೆ ಎಂದರೆ ಅತಿಶಯೋಕ್ತಿಯಾಗಲಾರದು. ■

## ಇನಿಯನಿಗೆ ಕರೆ

ಬೇಗನೆ ಕರೆಯಲು ಬನ್ನಿರಿ ತವರಿಗೆ
ಓಡಿ ಬರುವೆನು ನಿಮ್ಮ ಜೊತೆ
ಸೆರಗನು ಬೀಸುತ ಹೂವನು ಮುಡಿಯುತ
ಬಂದು ನಲಿವೆನು ನಿಮ್ಮ ಜೊತೆ

ಅಪ್ಪನ ಆದರ, ಅಮ್ಮನ ಮಮತೆ
ಒಲವಿನ ತಮ್ಮನ ಸಹವಾಸ
ಏನೇ ಇದ್ದರೂ ನೀವಿರದಾ ಮನೆ
ನನಗದು ಬರಿಯ ವನವಾಸ!

ಬನದಲಿ ಅರಳಿವೆ ಬಣ್ಣದ ಹೂಗಳು
ಮುಡಿಯಲು ಯಾಕೋ ಮನಸಿಲ್ಲ.
ಹೂದಂಡೆಯ ತಂದು ಮುಡಿಸಲು ಬಂದು
ತಬ್ಬಿದ ನೆನಪೇ ದಿನವೆಲ್ಲ!

ಒಲವಿಂದ ತಂದ ರೇಶಿಮೆ ಸೀರೆ
ಕರೆದಿದೆ ನನ್ನನು ಧರಿಸಲು ಬಾರೆ
ಸಂತಸವೀಯುವ ನೀವೇ ಇರದಿರೆ
ನನಗೇಕೆ ಬಿಡಿ, ಭಾರೀ ಸೀರೆ?

ರಂಗೋಲಿ ಬಿಡಿಸಿ ತುಲಸಿಗೆ ನಮಿಸಿ
ಕೇಳುವೆಯಿಂದು ವರವೊಂದು
ನೂರು ಜನುಮದಲಿ ಸತಿ-ಪತಿಯರಾಗಿ
ಒಲವು - ನಲಿವಿನಲಿ ಬಾಳಲೆಂದು

**- ಆರ್. ಎಚ್. ನಾಯಕ್, ಡೊಂಬಿವಲಿ**

## ಕನಸು

ಕಂಡ ಕನಸು ಸಾವಿರಾರು
ಬಂದ ಬದುಕು ಮೂರಲೊಂದು
ಮೂರು ದಿನದ ಜೀವನ
ನೂರಾರು ಕನಸು ಸಾಧ್ಯನಾ?

**– ಸಿಂದು ಎಸ್. ಪಿ. ಸಖರಾಯಪಟ್ಟಣ**

# ಕನ್ನಡ ಸಾಮಾಜಿಕ ಹಾಸ್ಯ ನಾಟಕಗಳ ಹರಿಕಾರ 'ಟಿ.ಪಿ. ಕೈಲಾಸಂ'

ಕನ್ನಡ ರಂಗಭೂಮಿಗೆ ಹಾಸ್ಯ ನಾಟಕಗಳನ್ನು ನೀಡಿ ಕನ್ನಡ ನಾಟಕ ಪಿತಾಮಹ, ಹಾಸ್ಯ ಪಿತಾಮಹ, ಕನ್ನಡಕ್ಕೊಬ್ಬನೇ ಕೈಲಾಸಂ ಎಂಬ ಬಿರುದುಗಳನ್ನು ಪಡೆದ ಅದ್ಭುತ ನಾಟಕಕಾರ ತ್ಯಾಗರಾಜ ಪರಮಶಿವ ಕೈಲಾಸಂರವರು 29-7-1884 ರಂದು ಬೆಂಗಳೂರಿನ ತಾರಾಮಂಡಲಪೇಟೆಯಲ್ಲಿ ಜನಿಸಿದರು. ಇವರ ತಂದೆಯವರು ಜಸ್ಟೀಸ್ ಪರಮಶಿವ ಅಯ್ಯರ್ ಹಾಗೂ ತಾಯಿ ಕಮಲಮ್ಮನವರು. ಬಾಲ್ಯದಿಂದಲೂ ಹಾಸ್ಯ, ಲೇವಡಿ ಮಾಡುತ್ತಿದ್ದ ಕೈಲಾಸಂರವರ ಮನೆ ಈಗಿನ Minto ಹಾಸ್ಪಿಟಲ್‌ನ ಎದುರುಗಡೆ ಇರುವ ಹೊಟೇಲ್ Madhavan ಈಗ ಈ ವೃತ್ತಕ್ಕೆ 'ಕಾಲಾಸಂ ವೃತ್ತ' ಎಂದು ನಾಮಕರಣ ಮಾಡಿದ್ದಾರೆ. ದೊಡ್ಡ ಮನೆಯ ಹೆಸರು 'White House' ಆದರೆ, ಕೈಲಾಸಂ ಮಾತ್ರ 'I am a blacks pot in the White House' ಎನ್ನುತ್ತಿದ್ದರು. ಆಗರ್ಭ ಶ್ರೀಮಂತರಾದರೂ 'I was born with a Silver ..... but it hurts my mouth' ಎಂದೆನ್ನುತ್ತಿದ್ದರು. ಅವರು ಮಲಗುತ್ತಿದ್ದುದು ಹರಕಲು ಚಾಪೆ ಹಾಗೂ ಗಾಳಿ ಇಲ್ಲದ ಫುಟ್‌ಬಾಲ್ ಇವರ ತಲೆದಿಂಬು. ಇವರಿಗೆ ಕನ್ನಡ, ತಮಿಳು, ತೆಲುಗು, ಇಂಗ್ಲಿಷ್ ಹಾಗೂ ಉರ್ದು ಭಾಷೆಗಳ ಪ್ರೌಢಿಮೆ ಇತ್ತು.



ಟಿ.ಪಿ. ಕೈಲಾಸಂರವರು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಬಿ.ಎ. ಪದವಿಯನ್ನು First Rankನಲ್ಲಿ ಗಳಿಸುವ ಮೂಲಕ ಕೀರ್ತಿವಂತರಾದರು. ಇವರು ಆಯ್ದುಕೊಂಡ ವಿಷಯ Geology ಅಂದರೆ ಭೂಗರ್ಭಶಾಸ್ತ್ರ. ಲಂಡನ್‌ಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತೆರಳಿದರು. ಏಳು ವರ್ಷಗಳಲ್ಲಿಯೂ ಏಳು Rank ಪಡೆದು, ಏಳು Gold Medalಗಳನ್ನು ಸಂಪಾದಿಸಿದರು. ಅಷ್ಟೇ ಅಲ್ಲದೆ ಲಂಡನ್‌ನ Geological Society ಯವರು ಕೈಲಾಸಂ ಅವರಿಗೆ Fellowship ನೀಡಿದರು. ಏಳು ವರ್ಷಗಳ ಅವರ ಲಂಡನ್ ಜೀವನ ಮರೆಯಲಾಗದು. ಏಕೆಂದರೆ ಅಲ್ಲಿ ನಡೆಯುತ್ತಿದ್ದ ಇಂಗ್ಲಿಷ್ ನಾಟಕಗಳನ್ನು ನೋಡುವ ಅವಕಾಶ ಅವರಿಗೆ ದೊರೆಯಿತು. ಒಳ್ಳೆಯ ವ್ಯಾಯಾಮಕಾರರಾಗಿದ್ದ ಇವರು ಪಾಶ್ಚಾತ್ಯ ಸಂಗೀತವನ್ನೂ ಕಲಿತರು. ಬರ್ನಾಡ್ ಶಾ ಎದುರುಗಡೆ ನಾಟಕವಾಡಿ ಮೆಚ್ಚುಗೆ ಗಳಿಸಿದರು. Fun ಮಾಡುವ ಚಮತ್ಕಾರ ಬೆಳೆಸಿಕೊಂಡರು. ಯಾರೋ ಬರ್ನಾಡ್ ಶಾ ಬಗ್ಗೆ ಕೇಳಿದಾಗ ಹಾಸ್ಯವಾಗಿ "He is an Irish but I am a ಅಯ್ಯಾರಿಷ್" ಅಂದರಂತೆ. ಭಾರತಕ್ಕೆ ವಾಪಸ್ಸಾದ ಬಳಿಕ ಕೈಲಾಸಂರವರನ್ನು ಲಂಡನ್‌ನಿಂದ ಏನು ಕಲಿತುಕೊಂಡು ಬಂದೆ ಎಂದಾಗ ತಕ್ಷಣ ಒಂದೇ Matchstic ನಿಂದ ಸಿಗರೇಟು ಹಚ್ಚುವುದನ್ನು ಕಲಿತೆ ಎಂದು ಎಲ್ಲರನ್ನೂ ಚಕಿತಗೊಳಿಸಿದ್ದರು. ಫುಟಬಾಲ್ ಆಟಗಾರರಾಗಿದ್ದರೂ ಬುಲ್ ಬುಲ್ ತರಂಗ್, ಗಿಟಾರ್, ಮೊದಲಾದವನ್ನು ಸೊಗಸಾಗಿ ನುಡಿಸುತ್ತಿದ್ದರು.

ಇವರಿಗಿದ್ದ ಪದವಿಯ ಫಲವಾಗಿ ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ಮುತ್ಯಾಲ ಫುಟ್ಟ ಪ್ರದೇಶದಲ್ಲಿ ಸೀಸ ತೆಗೆಯುವ ಕೆಲಸದ ಅಧಿಕಾರಿಯಾಗಿ ನೇಮಕಗೊಂಡರು. ಎಲ್ಲರೊಡನೆ ಬೆರೆತು ಹಾಸ್ಯ ಮಾಡುತ್ತಾ, ಹಾಡುತ್ತಾ ಮೆಚ್ಚುಗೆ ಗಳಿಸಿದ್ದರು. ಆದರೂ ಇವರಿಗೆ ತೇಪೆದಾರಿ ಕೆಲಸ ಬೇಡವೆಂದು 1920 ರಲ್ಲಿ ಕೆಲಸಕ್ಕೆ ರಾಜೀನಾಮೆ ನೀಡಿದರು. ಕನ್ನಡ ನಾಟಕ ಕ್ಷೇತ್ರಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡು ಅನೇಕ ನಾಟಕಗಳನ್ನು ಕೊಡುಗೆಯಾಗಿ ನೀಡಿದರು.

T.P. ಕೈಲಾಸಂರವರು ನಾಟಕ ಬರೆಯುವಾಗ ನಮ್ಮ ರಂಗಭೂಮಿಯಲ್ಲಿ ಕೇವಲ ಪೌರಾಣಿಕ ಹಾಗೂ ಜಾನಪದ ನಾಟಕಗಳೇ ಪ್ರಸಿದ್ಧಿಯಾಗಿತ್ತು. ಕತ್ತಿ, ಗುರಾಣಿ, ಕಿರೀಟದಿಂದ ಕಂಗೊಳಿಸುತ್ತಿದ್ದ ಆ ಕಾಲದಲ್ಲಿ ಕೈಲಾಸಂರವರು ಕನ್ನಡ ರಂಗಭೂಮಿಗೆ ಹೊಸ ಆಯಾಮವನ್ನು ನೀಡಿದರು. ನಮ್ಮ ನಡುವೆ ಇರುವ ತಂತ್ರಗಳನ್ನೇ ಇಟ್ಟುಕೊಂಡು ಹಾಸ್ಯ ಸಾಮಾಜಿಕ ನಾಟಕಗಳನ್ನು ಬರೆದರು. ನಾಗತ್ತೆ, ಹಿರಣ್ಣಯ್ಯ, ಪುಟ್ಟು, ಸಾತೂ ಪಾತುಗಳ ಆಗಮನವಾಯಿತು. ಹಾಸ್ಯ, ವಿಡಂಬನೆ ಹೇರಳವಾಗಿತ್ತು. ಅಂಕು ಡೊಂಕುಗಳನ್ನು ಅಂದಿನ ಪಿಡುಗುಗಳನ್ನು ತಿದ್ದುವ ಪ್ರಯತ್ನ ಮಾಡಿದರು. ಬಾಲ್ಯವಿವಾಹ, ವಿಧವಾ ವಿವಾಹ, ವರದಕ್ಷಿಣೆಯ ಪಿಡುಗು, ಗ್ರಾಮ್ಯ ನಾಗರೀಕರ ವರ್ತನೆ, ವಿದೇಶೀ ಧೋರಣೆ, ಅಂದಿನ ಪಠ್ಯಕ್ರಮ... ಹೀಗೆ ಹಲವಾರು ವಿಷಯಗಳ ಬಗ್ಗೆ ನಾಟಕಗಳನ್ನು ಬರೆದು ಹೊಸ ಕ್ರಾಂತಿಯನ್ನು ಮಾಡಿದರು. "Kailasam writes for the stage not for the library" ಎಂದು Dr. C. R. Reddy ಹೇಳಿದ್ದರು. ಈ ನಾಟಕಗಳಲ್ಲಿ ವಿಡಂಬನೆಯ (SATIRE) ಕಿರೀಟವನ್ನು ಇಟ್ಟ ಕೀರ್ತಿ ಕೈಲಾಸಂರವರಿಗೆ ಸೇರಬೇಕು. ಇವರ ನಾಟಕಗಳಲ್ಲಿ "ಪರಿಹಾಸ್ಯ, ಅಪಹಾಸ್ಯ, ಮೂದಲಿಕೆ, ನಿಂದೆ, ಹುಚ್ಚು ಹಾಸ್ಯ, ವಿಕಟಹಾಸ್ಯ, ಚತುರೋಕ್ತಿ, ಗೇಲಿ, ವಕ್ರೋಕ್ತಿ ಹಾಗೂ ವ್ಯಂಗ್ಯೋಕ್ತಿ"ಗಳನ್ನು ಕಾಣಬಹುದಾಗಿದೆ. ಇಂಗ್ಲಿಷ್ ನಾಟಕಗಳನ್ನು ನೋಡಿದ ಅನುಭವ ಹಾಗೂ ಅವರಿಗಿದ್ದ ಅಪಾರ ಭಾಷಾ ಸಾಹಿತ್ಯ ಕನ್ನಡ ರಂಗಭೂಮಿಗೆ ಅನುಕೂಲವಾಯಿತು. ಕೈಲಾಸಂರವರಿಗೆ ಹೇಳಿ ಬರೆಸುವ ಅಭ್ಯಾಸವಿತ್ತೇ ಹೊರತು ತಾವಾಗಿ ಬರೆದವರಲ್ಲ. ಬಿ.ಎಸ್. ರಾಮರಾವ್, ಜಿ.ಪಿ. ರಾಜರತ್ನಂ, ಕೆ.ವಿ. ಅಯ್ಯರ್, ರಾ.ಶಿ. ವೈಲನ್ ಕೆ. ಇ.ಆರ್. ಸೇತೂರಾಮ್ ಹಾಗೂ ಮುಂತಾದವರು ಬರೆದುಕೊಂಡ ಪರಿಣಾಮ ನಮಗೆ ನಾಟಕಗಳು ದೊರೆಯುವಂತಾಯಿತು.

ಟಿ.ಪಿ. ಕೈಲಾಸಂರವರು ಒಟ್ಟು 17 ಕನ್ನಡ ನಾಟಕಗಳನ್ನು ಬರೆದಿದ್ದಾರೆ. ಅವುಗಳೆಂದರೆ "ಟೊಳ್ಳುಗಟ್ಟಿ, ಪೋಲೀಕಿಟ್ಟಿ, ಬಹಿಷ್ಕಾರ, ಹೋಂರೂಲು, ಗಂಡಸ್ಕತ್ರಿ, ವೈದ್ಯನ ವ್ಯಾದಿ, ತಾಳೀ ಕಟ್ಟೋಕ್ಕೂಲೀನೇ (ಸಾತೂತೌರ್ಮನೆ, ಪಾತೂತೌರ್ಮನೆ , ಯೋಧವಾಣಿ), ಹುತ್ತದಲ್ಲಿ ಹುತ್ತ, ಬಂಡ್ವಾಳಿಲ್ಲದ ಬಡಾಯಿ, ಅಮ್ಮಾವ್ರ ಗಂಡ, ಸೀ. ಕಣೀ ಸಾವಿತ್ರಿ, ಸತ್ತವನ ಸಂತಾಪ, ನಮ್‌ಕಂಪನಿ, ಅನುಕೂಲಕ್ಕೊಬ್ಬಣ್ಣ, ನಮ್‌ಕ್ಲಬ್ಬು, ನಮ್‌ಬ್ರಾಹ್ಮಣ್ಕೆ ಹಾಗೂ ಸೂಳೆ. 4 ಇಂಗ್ಲಿಷ್ ನಾಟಕಗಳನ್ನು ಬರೆದಿದ್ದಾರೆ. ಅವುಗಳೆಂದರೆ, The Burden, Fulfilment, The Perpose, The Brahamins Curse ಇಷ್ಟೇ ಅಲ್ಲದೆ ತಾವರೆಕೆರೆ, ಕಥೆಯನ್ನು ಮತ್ತು ಹಲವಾರು ಅತ್ಯುತ್ತಮ ಗೀತೆಗಳನ್ನು ಬರೆದಿದ್ದಾರೆ.

ಇವರ ಕೆಲವು ಕನ್ನಡ ನಾಟಕಗಳಲ್ಲಿ ಅವರು ಅಳವಡಿಸಿದ ಹಾಸ್ಯ ಹಾಗೂ ಸಮಾಜದಲ್ಲಿ ತಿದ್ದುವ ಪ್ರಯತ್ನ ಮತ್ತು ಬರೆದಿರುವ ಮುತ್ತಿನ ವಾಕ್ಯಗಳನ್ನು ಗಮನಿಸೋಣವೇ ! ಇವರು ಬರೆದಿರುವ ಮೊಟ್ಟ ಮೊದಲ ಕನ್ನಡ ನಾಟಕ "ಟೊಳ್ಳು ಗಟ್ಟಿ" ಅರ್ಥಾತ್ "ಮಕ್ಕಳಿ ಸ್ಕೂಲ್ ಮನೇಲಲ್ವೇ". ಮನೆಯ ಯಜಮಾನ ಹಿರಣ್ಣಯ್ಯನಿಗೆ ಹಿರಿಯ ಮಗ ಪುಟ್ಟು ಹಾಗೂ ಕಿರಿಯ ಮಗ ಮಾದು. ಈ ನಾಟಕದಲ್ಲಿ ಹಿರಣ್ಣಯ್ಯನ ಪತ್ನಿ ಭಾಗೀರಥಮ್ಮ ಹಾಗೂ ವಿಧವೆ ನಾಗಮ್ಮ ಮತ್ತು ಸಾತೂ-ಪಾತೂ ಹಿರಿ-ಕಿರಿ ಸೊಸೆಯಂದಿರು. ಪುಟ್ಟುವಿಗೆ ಕೇವಲ ಓದು ಒಂದೇ ಮುಖ್ಯ 'ಅಪ್ಪ ಸತ್ರೂ ಸಾಯ್ಲಿ ತಿಥಿವಡೆ ಯಾವಾಗ ಸಿಗುತ್ತೋ' ಅನ್ನುವ ಪ್ರಾಣಿ. ಮಾದು ಓದಿನಲ್ಲಿ Fail ಆಗಿದ್ರೂ ನಾಲ್ಕಾರು ಜನಕ್ಕೆ ಉಪಯೋಗಕ್ಕೆ ಬರುವ ಆಸಾಮಿ. ಮನೆಗೆ ಬೆಂಕಿ ಬಿದ್ದಾಗ ಪುಟ್ಟು ಕೇವಲ ತನ್ನ ಪುಸ್ತಕಗಳನ್ನು ತೆಗೆದುಕೊಂಡು ಹೊರಬರುತ್ತಾನೆ. ಆದರೆ, ಮಾಧು ತಂದೆ, ತಾಯಿ ಹಾಗೂ ಮಗುವನ್ನು ರಕ್ಷಿಸಿ ತಾನು ಮೂರ್ಛೆ ಹೋಗುತ್ತಾನೆ. 'ಪ್ಯಾಸೂಂದ್ರೆ - ಸ್ವರ್ಗಸುಖವೇ Failes ಅಂದ್ರೆ ನರಕ ಪ್ರಾಪ್ತಿಯೇ' ಎನ್ನುವ ಮಾತು ಎಷ್ಟು ಚೆನ್ನ. "ಈ ಭೂಮೀಲಿ ಹುಟ್ಟಿರೋದಕ್ಕೆ ನಾವು

ಏನು ಬಾಡಿಗೆ ಕೊಡಬೇಕು ಅಂದರೆ ಸುತ್ತಮುತ್ತಲೂ ಇರುವ ಜನರಿಗೆ ನಮ್ಮ ಕೈಲಾದಂತೆ ಸಹಾಯ ಮಾಡಬೇಕು" ಅನ್ನುವ ಮಾತು ಹಾಗೂ 'ಸುಕೋದ್ಧರಿತಾತ ಸಾವಿರಜನಕ್ಕೆತ್ರಾತ' ಅನ್ನುವುದು ಎಷ್ಟೊಂದು ಅರ್ಥಗರ್ಭಿತವಾಗಿದೆ. ನಾಗತ್ತೆ ಆಡುವ ಮಾತುಗಳು ಮುತ್ತಿನಂತಿದೆ. ಮಕ್ಕಳನ್ನು ನಾವು ಮನೆಯಲ್ಲಿ ಹೇಗೆ ಬೆಳೆಸಬೇಕೆಂಬ ನುಡಿಯೂ ಈ ನಾಟಕದಲ್ಲಿದೆ.

ಈ ನಾಟಕದಲ್ಲಿ ಗ್ರಾಮಫೋನು ಹಾಗೂ ಕ್ಯಾಮೆರಾ ಬಗ್ಗೆ ಹೇಳಿರುವ ಹಾಸ್ಯ ಹೇಗಿದೆ ಅಂದರೆ, ಗ್ರಾಮಾಫೋನೂ ಗೊತ್ತಿಲ್ವೇ... ಅಯ್ಯೋ ಕರೀಮರಡ್ಪೆಟ್ಟಿಗೆ... ದೊಡ್ಡೊಂದು ಗಡಿಯಾರ ತಕ್ಕೊಳ್ಳೋದು... ಸಿಪ್ಪೆ ಸುಲ್ದಾಕೋದು... ಗಡಿಯಾರದ ಹೊಟ್ಟೇಲಿರೋದನ್ನೆಲ್ಲಾ ಪೆಟ್ಗೇಲಿ ಜೊಡ್ಸೋದು... ಮುಚ್ಚಿ ಕಬ್ಬಿಣದ್ದು.. ಒಂದು ಚಕ್ರ ಸಿಕ್ಸೋದು... ಮೇಲೊಂದು ಕರೀದೋಸೆ Record ಹಾಸೋದು... ಸೂಜಿ ಚುಚ್ಚಿ ಬಕೋಂತ ಬಾಯ್ಮುಚ್ಕೊಂಡಿರೋ.... ಕೊಂಬೊಂದು ತಗುಲ್ಸಿ ತಿರುಗಿಸಿದ್ರೆ ಸುಬ್ಬೂ, ಬೊಗಳಿದ್ದೆಲ್ಲಾ ತಿರುಗೀ ಬೊಗಳುತ್ತೆ.

ತಸ್ವೀರ ಪೆಟ್ಗಿ ಅಂದರೆ ಕ್ಯಾಮೆರ ಗೊತ್ತಿಲ್ವೆ. ಅದೊಂದು ಜಂತೂ ಪ್ರಾಣಿ... ಪಂಚಪಾದ ಅದಕ್ಕೆ. ಹಿಂದೆ ನಿಂತ್ಕೊಂಡು ಬುರ್ಖಿ ಹಾಕ್ಕೊಂಡು ಬೆದರಿಸ್ತಾನಲ್ವಾ ಅವನ್ದೆರಡು ಕಾಲು... ಪೆಟ್ಗೀದು ಮೂರು - ಐದು, ಏಕಾಕ್ಸಿ... ಕಣ್ಣೊಂದೇ. ಎದುರುಗಡೆ ನಿಂತುಕೊಂಡು ಸ್ವರೂಪ ನಾಶ್ನ ಮಾಡಿಕೊಳ್ಳೋದು ಗೊತ್ತೇ.......

ಈ ಟೊಳ್ಳುಗಟ್ಟಿ ನಾಟಕ, ನಾಟಕ ಸ್ಪರ್ಧೆಯಲ್ಲಿ ಬಹುಮಾನ ಗಿಟ್ಟಿಸಿತು. ರಂಗಭೂಮಿಗೆ ಹೊಸ ರೀತಿಯ ಬೆಳಕನ್ನು ಚೆಲ್ಲುತ್ತಾ ಎಲ್ಲರ ಮೆಚ್ಚುಗೆ ಗಳಿಸಿತು.

'ತಾಳೀಕಟ್ಟೋಕೆ ಕೂಲೀನೇ' ನಾಟಕದಲ್ಲಿ ಮೂರು ಕಿರುನಾಟಕಗಳಿವೆ. ಅವುಗಳೆಂದರೆ 'ಸಾತೂತೌರ್‍ಮನೆ', 'ಪಾತೂತೌರ್‍ಮನೆ' ಹಾಗೂ 'ಯೋಧವಾಣಿ'. ನಿಂತು ಹೋಗಬೇಕಾಗಿದ್ದ ಮದುವೆಗೆ ಬಡ ಹುಡುಗನನ್ನು ಕರೆದು ಮದುವೆ ಮಾಡಿಸುವ ಪ್ರಯತ್ನ ಒಂದಾದರೆ, ವರದಕ್ಷಿಣೆ ಪಿಡುಗನ್ನು ಸಮರ್ಥವಾಗಿ ಬರೆದಿದ್ದಾರೆ. Postman ನಿಂದ ಬಂದ Notpaid Letterನ್ನು ಪಡೆಯುವ ಹಾಸ್ಯ ಪ್ರಸಂಗ, ನಾಗತ್ತೆ, ಪಾತೂ ಮನೆಯ Board ನೋಡಿ ಆಡುವ ಮಾತು ನಗೆಯ ಅಲೆಯನ್ನೂ ಎಬ್ಬಿಸುತ್ತದೆ.

ನಾಗತ್ತೆ : ಇದೇನೇ ಸಾಲಿ ಹುಡುಗರು ಹಲಗೆ ಮೇಲೆ ಬರೆದ ಹಾಗೆ ಬಾಗ್ಲಿಗೆ ತಗಲಿಸಿದೆ ಏನೇ ಇದೂ...

ಪಾತೂ : ಅದು ನಮ್ಮ ಮನೆ ಹೆಸರು. "ಜ್ಞಾನವಿಲ್ಲಾ" ಅಂತಾ...

ನಾಗತ್ತೆ : ಗೊತ್ತು ಗೊತ್ತು. ಆದರೆ, ಅದನ್ನು ನಾಚಿಕೆ ಹೇಸ್‌ಗೆ ಇಲ್ಲದೆ ಬೀದೀಲಿ ಬಡಕೊಳ್ಳೋದೇ....

ಇಷ್ಟೇ ಅಲ್ಲದೆ, ನಾಗತ್ತೆ ಮಕ್ಕಳನ್ನು ಹ್ಯಾಗೆ ಬೆಳೆಸಬೇಕೂಂತ ಹೇಳ್ತಾ, "ಹ್ಯಾಗಿರಬೇಕು, ಹ್ಯಾಗೆ ಮಾಡಬೇಕು ಅಂಬೋದನ್ನೆಲ್ಲಾ ಹೇಳೋಕೆ ಬದ್ಲಾಗಿ "ತನ್ನ ಹೊಟ್ಟೇಲಿ ಹುಟ್ಟಿದ ಒಂದೆರಡು ಮಕ್ಕಳನ್ನು ಸಾಕಿ ನಮೂನೆಯಾಗಿ ತೋರ್ಸೋದು ಉತ್ತಮ ಅಲ್ವೇ" ಎಂಬ ಮಾತು ಇಂದಿಗೂ ಪ್ರಸ್ತುತ.

ಪೋಲಿ ಕಿಟ್ಟಿ ನಾಟಕ Scout ನ ವಿವಿಧ ಉದ್ದೇಶವನ್ನು ವಿವರಿಸುತ್ತದೆ. ಕಿಟ್ಟಿಯ ಏಟನ್ನು ತಾಳಲಾರದೆ Scoutಗೆ ಸೇರಿಸುತ್ತಾರೆ. ಏಕೆಂದರೆ ಅಲ್ಲಿ ಸೇರಿದ್ರೆ, ಜಿಲೇಬಿ ಹಾಗೂ ಖಾರಾ ಕೊಡ್ತಾರೆ. ಕಿಟ್ಟಿ ಪೈಲ್ವಾನ್ ಇದ್ದ ಹಾಗೆ ಇರ್ತಾನೆ "ಮೈ ಮುಟ್ಟಿ ಮಾತಾಡೋ ಮುರ್ಗ್ಯೆ" ಅಂತಾ ತನ್ನ Bicapsನ್ನು ಕುಣಿಸುತ್ತಾನೆ. Scoutನ ಉದ್ದೇಶ 'BEPREPARED' ಇದನ್ನು ಚಾಚೂ ತಪ್ಪದೆ ಪರಿಪಾಲಿಸುವ ಕಿಟ್ಟಿ ಅನೇಕ ಉತ್ತಮ ಕೆಲಸಗಳನ್ನು ಮಾಡಿ ಮೆಚ್ಚುಗೆ ಗಳಿಸುತ್ತಾನೆ. "ಬೆದರ್‍ಕೊಂಡು ಬದುಕಿರೋಗಿಂತ Brave ಆಗಿ ಬೆಂಕೀಲಿ ಬೀಳೋದೆ ವಾಸಿ" ಅಂತಾ ಹೇಳ್ತಾ ಬೆಂಕೀಲಿ ಬಿದ್ದ ಮಗುವನ್ನು ರಕ್ಷಿಸುತ್ತಾನೆ. High School ಬಟ್ಟೆ ಬಗ್ಗೆ ತಾನು ಹೇಳುವ ಹಾಸ್ಯ ಪ್ರಸಂಗ ಸೊಗಸಾಗಿದೆ.

ಕೈಲಾಸಂರವರು ಬರೆದ ಇನ್ನೊಂದು ಸೊಗಸಾದ ನಾಟಕ "ಹೋಂರೂಲು" ಇದಕ್ಕೆ ಇನ್ನೊ 3 ಹೆಸರಿದೆ. 'ಹೊರಗಿನ ಹುಲಿ ಮನೇಲಿಲಿ', 'ಮಂಕ್ಮುಚ್ಚೊ ಹೆಣ್ಣು ಮನೆತನಕಣ್ಣು', ಅಥ್ವಾ 'ಪಾರ್ಲಿಮೆಂಟ್ ಕೊಟ್ರೂ ಪತ್ನಿಕೊಡಳು'. ಅತ್ತೆ ಸೊಸೆಯರ ಅನಾದಿ ಜಗಳ ಈ ನಾಟಕದಲ್ಲಿದೆ. Muncipal President ರಾಮಣ್ಣ ಕೇವಲ ಮೈದಾನದ ಹುಲಿ, Window Lemarriage ಬಗ್ಗೆ ಕೇವಲ ಬ್ರಾಹ್ಮಣ ಬಿಗೀತಿದ್ರೂ ತನ್ನ ಮನೆಯಲ್ಲಿ ಎರಡನೆ ಹೆಂಡತಿ ಹಾಗೂ ತನ್ನ ತಾಯಿ ವಿಧವೆ ವೆಂಕಮ್ಮನವರ ಜಗಳ ಬಿಡಿಸಲಾರದ ಪ್ರಾಣಿ. Iyer Iyengar ಹಾಗೂ ರಾಯರ ಮಾತುಗಳು ನಿಜಕ್ಕೂ ಆಶ್ಚರ್ಯಪಡಿಸುತ್ತದೆ. ಕನ್ನಡದ ಬಗ್ಗೆ ಹೇಳ್ತಾ "ನನಕು ಕನ್ನಡಂ ಕೊತ್ತಿಲ್ಲ ಕೊತ್ತಿಲ್ಲಾನ ಮೈಸೂರು ಕನ್ನಡಂ ಕುತ್ತಾ ಕನ್ನಡಂ ಕೊತ್ತಿಲ್ಲಾ. ನಿಮ್ಮ ಕನ್ನಡ ತೋಲಿಲ್ಪಿದ ರಸಬಾಳೆ ಎನ್ನುವ ಮಾತು ಹೇಗಿದೆ!. ರಾಮಣ್ಣನವರ ಪ್ರತಾಪವನ್ನು ನಾಟಕದ ಕಡೆಯ ದೃಶ್ಯದಲ್ಲಿ ಕಾಣಬಹುದಾಗಿದೆ. ಯಜಮಾನ್ರಿದ್ದಾರೇನು - ರಾಮಣ್ಣೋರು ಇದ್ದಾರೇನೂ ಅಂತ ಕೇಳುವರಿಗೆ ವಿಧವೆ ತಾಯಿ ಸುಬ್ಬಮ್ಮ "ಅಯ್ಯೋ ಯಾರೋ ಬಡ್ಕೋತಾ ಇದ್ದಾರೆ ಯಜಮಾನ್ರಿದ್ದಾರೇನೂಂತ ಆದರೆ ಈ ಮನೆಗುಟ್ಟು ಅವನಿಗೆ ಗೊತ್ತಿಲ್ಲ. ರಾಮಣ್ಣಂದೂಂತ ತಿಳ್ಕೊಂಡಿದ್ದಾರೆ.. ಸರೀ ಆಫೀಸ್ರೂಮ್ಗೆ ಎಳಕೊಂಡುಹೋಗಿ. ಕುರ್ಚಿಮೇಲೆ ಕೂಡ್ಸೀ.. ಬೋಳಿಸಿದ ನಿನ್ನ ಮೀಸೇನ ನಿನ್ನ ಹೆಂಡತಿ ತುಟೀಗೆ ತಗಲ್ಸೀ ತೋರ್ಸೋ ಮನೇ ಯಜಮಾನ್ರನ್ನ ಮೂಢಾ... ಮೂಢಾ..." ಅನ್ನುತ್ತಾಳೆ.

ಗಂಡ ಹೆಂಡತಿ ಅನ್ಯೋನ್ಯವಾಗಿದ್ದರೆ ಬಾಳು ಎಷ್ಟು ಚೆನ್ನ ಎಂಬುದಕ್ಕೆ ಅವರು ಬರೆದಿರುವ ನಾಟಕ 'ಅಮ್ಮಾವ್ರ ಗಂಡ' ಅರ್ಥಾತ್ 'ಯಜಮಾನ್ರ ಹೆಂಡತಿ' ಒಂದು ಕಡೆ ಹೆಂಡತಿ ಜೋರು ಕೇವಲ ಸಮಾಜ Club Importent ಅಂತ ಹೇಳ್ತಾ ಇರುವ ಸರೋಜ ತನ್ನ ಮಗುವಿನ ಬೆಳವಣಿಗೆಯ ಬಗ್ಗೆ ಅಸಡ್ಡೆ ತೋರಿಸುತ್ತಾಳೆ. ಇನ್ನೊಂದು ಕಡೆ ನರಸಿಂಹಯ್ಯ ಹೆಂಡತಿ ಮೇಲೆ ಜೋರು ಮಾಡುವ ಮಹಾ ಆಸಾಮಿ. ಅವಳ ಹೆಂಡತಿ ಕಮಲಿಗೆ ಗಂಡನ ಎದುರಿಗೆ ಜೋರಾಗಿ ಮಾತನಾಡದೆ ಮಕ್ಕಳ ಪಾಲನೆ ಮಾಡುತ್ತಾಳೆ. ಎರಡು ಮನೆಗಳ ತಪ್ಪುಗಳನ್ನು ತಾನೇ ತಿದ್ದಿಕೊಂಡು ಸಂಸಾರ ನಡೆಸುವ ಸುಂದರ ನಾಟಕವಿದು. 'ಲೇ' ಅಂತ ಹೇಳಿ 'ರಿ' ಅನ್ನೋಷ್ಟರಲ್ಲಿ ತಾವು ಬಂದ್ಬಿಟ್ರಾ ಕಮ್ಮಿ LADY ಅನ್ನುವ ನರಸಿಂಹಯ್ಯನ ಮಾತು ನಿಜಕ್ಕೂ ಹಾಸ್ಯದ ಇನ್ನೊಂದು ಹೊನಲು.

"ನೀತಿ ಹೇಳೋಕೆ ಆತನ್ನ ಕರೆದರೆ ಆತ ಹೆಂಡತಿ ಬಿಟ್ಟು ಆರು ತಿಂಗಳಾಯ್ತು" ಎನ್ನುವ ಗಂಡ ಮಾತಿನ ತದ್ರೂಪ ವೈದ್ಯನ ವ್ಯಾಧಿ" ನಾಟಕ


ನೀತಿ ಹೇಳೋಕೆ ಆತನ್ನ ಕರೆದರೆ ಆತ ಹೆಂಡತಿ ಬಿಟ್ಟು ಆರು ತಿಂಗಳಾಯ್ತು ಎನ್ನುವ ಗಾದೆ ಮಾತಿನ ತದ್ರೂಪ ವೈದ್ಯನದ್ಬುಧಿ" ನಾಟಕ

ಬಾಡಿಗಾದಾರನ ಬವಣೆಯನ್ನು ತಿಳಿಹೇಳುವ ಸೊಗಸಾದ ನಾಟಕ 'ಅನುಕೂಲಕ್ಕೊಬ್ಬಣ್ಣ' ಖಯಾಲಿತನದ ಬಗ್ಗೆ ಮಾತಾಡ್ತಾ ಗಾಂಧೀಜಿಯವರನ್ನು ಚಿತ್ರಿಸಿರುವ ರೀತಿ ಹೀಗಿದೆ, "ಅಪ್ಪಾದಿವಾನ... ತಾತಾದಿವಾನ... ತಾನು ಬ್ಯಾರಿಸ್ಟ್ರು... ಇದನ್ನೆಲ್ಲಾ ಬಿಟ್ಬಿಟ್ಟು ಭಾರತ್ಮಾತೆ ಹೆತ್ತಮ್ಮನಿಗಿಂತ ಹೆಚ್ಚು. ದೇಶದ ಸುಖ ನನ್ನುಖಿಕ್ಕಿಂತ ದೊಡ್ಡ್ದೂಂತ ಹಟ ಹಿಡ್ದು Lord ಗಾಂಧಿ ಆಗಬಹುದಾಗಿದ್ದ ಪವಡೀನ ವದ್ರಿ ಹಸ್ಕೋರ ಮಾಂಸ ರಕ್ತಕ್ಕೆ ಮೇವು ತೋರಿಸ್ತಿದ್ರೂ ತಾನ್ ಪಟ್‌ಗೆ ಎಮ್‌ಕೆ ಗಾಂಧಿ ಆಗಿರೋದ್ರಲ್ಲಿ ತೃಪ್ತಿ ಕಾಣ್ತಿದ್ದರು.

'ಬಂಡ್ವಾಳಿಲ್ಲದ ಬಡಾಯಿ' ಇನ್ನೊಂದು ನಾಟಕ. ಯಾವತ್ತೂ Courtಗೆ ಬರೀ ಬಡಾಯಿ ಕೊಚ್ಚಿಕೊಳ್ಳುವ ಹಾಸ್ಯ ನಾಟಕ. ನಾಟಕ ಮುಖ್ಯ ಪಾತ್ರಧಾರಿ ಜೀವ್ಹೋಲಿನ ಮಗ ಮುದ್ದ್ಮಣಿಯ ಬಗ್ಗೆ ಹೇಳುವ ಮಾತು ನಿಜಕ್ಕೂ ಹಾಸ್ಯದ ಪರಮಾವಧಿ. ಈ ವೈಲಿನ ಮಗು ಹೇಗಿದೆ ಎಂದರೆ ತಾನೋ ಜನಕ, ಅಮ್ಮಜನಕ, ತನ್ನ ಹೆಂಡತಿ ಸ್ವಲ್ಪಮನಸ್ಸಿಗ ನೋವಾದ್ರೆ ಜಲಜನಕ ಆದ್ರೆ ನಮ್ಮಿಬ್ಬರ ಮಧ್ಯೆ ಈ ಇಂಗಾಲ ಎಲ್ಬಂತು ಅಂತೂ ಹೇಳ್ತಾನೆ.

ಕೈಲಾಸಂ ಅವರ ನಾಟಕಗಳಲ್ಲಿ ಅನೇಕ ನುಡಿ ಮುತ್ತುಗಳನ್ನು ಕಾಣಬಹುದಾಗಿದೆ. 1) ನಾಲ್ಗೆ ಸೂಜಿ ಆದ್ರೂ ಮಾತೆ ನಡೆತೀಲಿ ಸೀತೆ, 2) ಏನು ಹೊಲಸೂ ಈ Holes ಹೊಲಿಸಬೇಕು, 3) ಬಣ್ಣಾ ಗಾಂಧಾರಿ ಗುಣ ಕಸ್ತೂರಿ, 4) ಮಾತೂ ಆಡ್ಬೇಕೂ ಮೀನಿಂಗೂ ಇರ್ಬ್ಯಾರ್ದು, 5) ಕಾಡಿಗೆ ಹೋದರೂ Comforts ಇರಬೇಕು, 6) ಸೆರೆಮನೇಲಿದ್ರೂ Cermoney ಬಿಡ್ಬಾರ್ದು, 7) ಮರ್‍ಯಾದೆ ಕೊಟ್ಟು ಮರ್‍ಯಾದೆ ತಗೋಳೋದೇ ಮಹನೀಯರ ಧರ್ಮ, 8) ಎಂಜಲ್ತಿಂದ್ರೂ ಎನಾಮೆಲ್ (ಪುಟ 12ಕ್ಕೆ)

# ಗೋಡೆಗಳು



ಗೋಡೆಗಳಿಗೇನು,
ತೆರವಿದ್ದಲ್ಲೆಲ್ಲ ತಲೆಯೆತ್ತಿ ಸಾಲುಗಟ್ಟಿ ನಿಂತಿವೆ...
ಅಡ್ಡಗಟ್ಟಿ, ದುರುಗುಟ್ಟಿ, ಎದೆತಟ್ಟಿ ನಿಂತಿವೆ...
ಬಿರುಕುಗಳಲ್ಲಿ ಹುಟ್ಟಿ, ಸ್ವತಃ ಬಿರುಕು ಬಿಟ್ಟರೂ..
ಈ ಗೋಡೆಗಳ ಆಯುಷ್ಯ...ಮನುಷ್ಯನಿರುವವರೆಗೆ ತಾನೆ!

ಮುಕ್ಕೋಟಿ ದೇವರಿಗೆ ಮುಕ್ಕೋಟಿ ಗೋಡೆಗಳು..
ಸರಹದ್ದುಗಳಲ್ಲಿ ಹದ್ದಾಗಿ ಕೂತ ಗೋಡೆಗಳು...
ಭಾಗಿಸಿ ಗುಣಿಸಿಕೊಂಡ, ಕೂಡಿಸಿ ಕಳೆದುಕೊಂಡ ಹೋಳು ಗೋಡೆಗಳು
ಬಿಕ್ಕಟ್ಟುಗಳು ಕಟ್ಟಿದ ಇಕ್ಕಟ್ಟು ಗೋಡೆಗಳು...
ಅಡಿಗಡಿಗೂ ಅಡಗಿಕೊಳ್ಳುವ ಹೇಡಿ ಗೋಡೆಗಳು..
ತನು ಮುಚ್ಚದ, ಮನಮುಚ್ಚುವ ಲಜ್ಜೆಗೇಡಿ ಗೋಡೆಗಳು..
'ನಾ ಬಿಡೆ', 'ನಾ ಕೊಡೆ' ಅನ್ನೋ ತಡೆಗೋಡೆಗಳು
'ನೀ ಆಚೆ', 'ನಾ ಈಚೆ' ಅನ್ನೋ ನಾಚಿಕೆಗೇಡಿ ಗೋಡೆಗಳು..
ಹತ್ತಬಿಡದ, ಹತ್ತಿದರೆ ಹಾರಗೊಡದ, ಹಾರಿದರೆ ಕೆಳಗೆಡುವುವ
ಕಿಡಿಗೇಡಿ, ತಿಳಿಗೇಡಿ, ಕೇಡಿ ಗೋಡೆಗಳು
ಮಂದಿರದ ಕೇಸರಿ ಗೋಡೆ....
ಮಸೀದಿಯ ಹಸಿರು ಗೋಡೆ..
ಇಗರ್ಜಿಯ ಬಿಳಿ ಗೋಡೆ..
ಆಮೇಲೆ..ಮೇಲು ಗೋಡೆ, ಕೀಳು ಗೋಡೆ..
ಎಸ್.ಸಿ./ಎಸ್.ಟಿ./ಒ.ಬಿ.ಸಿ. ಗೋಡೆ ಬೇರೆ..
ನೀರಿಗೊಂದು ಗೋಡೆ, ಆಕಾಶಕ್ಕೊಂದು ಗೋಡೆ..
ಕುಲ-ಕುಲ-ಕುಲವೆಂದ ಕುಲಗೆಟ್ಟ ಗೋಡೆಗಳು...
ಬಣ್ಣಗಳಿಂದ ಬಣ್ಣಿಸಿಕೊಂಡ, 'ಬಣ್ಣ ಮಸಿ ನುಂಗಿದ' ಗೋಡೆಗಳು..
ನಂದು-ನಿಂದುಗಳ ನಿಂದೆಯಲ್ಲಿ ನೊಂದ ಗೋಡೆಗಳು.

'ಜಾಲಿಮ ಲೋಶನ ಗಜಕರ್ಣ ಔಷಧ' ಮಾರುವ ಗೋಡೆಗಳು..
'ವಾಸು loves ಸಪ್ನಾ' ಗೋಡೆಗಳು..
ಅಶ್ಲೀಲ ಸಾಹಿತ್ಯದ ಮೂತ್ರ ವಿಸರ್ಜಿತ ಗೋಡೆಗಳು.
stick no bills ಗೋಡೆಗಳು.
ನಾಯಿ ಕಾಲೆತ್ತುವ, ಕಾಗೆ ಪ್ರಸಾದವಿಕ್ಕುವ ಗೋಡೆಗಳು.
ಪಾನ್‌ಬೀಡದಿಂದ ಕೆಂಪೇರಿದ ಗೋಡೆಗಳು ..
'ದಮ್ಮಿದ್ದರೆ ಉಗಿ', ಅನ್ನೋ ಹಿಂದೂ-ಮುಸ್ಲಿಂ-ಸಿಕ್- ಇಸಾಯಿ
ದೇವರುಗಳ ಚಿತ್ರಗಳ ರಕ್ಷಾ-ಕವಚ ಧರಿಸಿದ ಗೋಡೆಗಳು.

ಬೀಸುಗಾಳಿಗೆ ಎಂಟ್ರಿ ನೀಡದ ಎ.ಸಿ. ಗೋಡೆಗಳು..
'ಸೂರ್ಯ – ಕಿರಣ – ಪ್ರವೇಶ– ನಿಷೇಧ' ಗೋಡೆಗಳು..
ಕಿಟಕಿ-ಬಾಗಿಲುಗಳಿಲ್ಲದ ಒಳಮುಖಿ ಗೋಡೆಗಳು...
ಗಾಜಿನ ಚೂರುಗಳ ಮುಕುಟಪ್ರಾಯ ಗೋಡೆಗಳು ..
ಪಾಚಿ ಮೆತ್ತಿದ, ಹುಳು ಹತ್ತಿದ ಗೋಡೆಗಳು ...
ಮತಿ ಬಿಟ್ಟ, ಗತಿ ಕೆಟ್ಟ ಗೋಡೆಗಳು.
'ದಿವಾರ್ ನಲ್ಲಿ ಅಣ್ಣ – ತಮ್ಮನ ನಡುವೆ
'ಶಕ್ತಿಯಲ್ಲಿ ಅಪ್ಪ – ಮಗನ ನಡುವೆ
'ಮದರ್ ಇಂಡಿಯ' ದಲ್ಲಿ ತಾಯಿ ಮಗನ ನಡುವೆ
'ಸಿಲ್ ಸಿಲಾ'ದಲ್ಲಿ ದಂಪತಿಗಳ ನಡುವೆ
'ಸೌದಾಗರ್'ನಲ್ಲಿ ಆಪ್ತ ಮಿತ್ರದ ನಡುವೆ
ತಲೆಎತ್ತಿ ನಿಂತ, ನಿಂತು ತಲೆ ತಗ್ಗಿಸಿದ
ನಾವೇ ಕಟ್ಟಿ, ನಾವೇ ಎಡವೋ ಗೋಡೆಗಳು.
ಕೆಡವಲಾಗದ ಈ ಗೋಡೆಗಳ ಗೊಡವೆ ಬಿಡಿ...

ಡಾಮರ್ ಅಂಚಿನ ಸುಣ್ಣದ ಸೀರೆ ಉಟ್ಟ ಗೋಡೆಯ ನೋಡಿ..
ಬಿರುಕುಗಳಲ್ಲಿ ಮೊಳಕೆಯೊಡೆದ ಚಿಗುರುಗಳ ನೋಡಿ..
ಶಂಖಪುಷ್ಪ ಮೊಳಗಿದ ಗೋಡೆಗಳ ನೋಡಿ..
ಬೆರಣಿ ತಟ್ಟಿಸಿಕೊಂಡ ಗೋಡೆಗಳ ನೋಡಿ.
ರಂಗೋಲಿ ಚಿತ್ತಾರಿಸಿಕೊಂಡ ಗೋಡೆಗಳ ನೋಡಿ
ದೀಪದ ಹಣತೆಗಳನ್ನು ತಲೆ ಮೇಲೆ ಹೊತ್ತ ಗೋಡೆಗಳ ನೋಡಿ..

ಅಂತ.. ಒಂದು 'ಗೋಡೆ ಬರಹ'ವ ಬರೆಯುತ್ತದೆ
ಈ ನನ್ನ 'ಚರ್ವಿತ ಚರ್ವಣ'

– ಮನೋಹರ್ ನಾಯಕ್
(9820267025)
lingoindia@gmail.com

## ಮುಂಬೈ ವಿಶ್ವವಿದ್ಯಾಲಯ ಕನ್ನಡ ಎಂ.ಎ.ಗೆ ಅರ್ಜಿ ಆಹ್ವಾನ

ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯವು ಕನ್ನಡ ಎಂ.ಎ. (ಸೆಮೆಸ್ಟರ್) ಪ್ರಥಮ ವರ್ಷ ತರಗತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. 2014-2015ನೇ ಸಾಲಿನ ತರಗತಿಗಳಿಗೆ ಸೇರಬಯಸುವ ಅರ್ಹ ಅಭ್ಯರ್ಥಿಗಳು ವಿಭಾಗದ ಕಛೇರಿಯಿಂದ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದು. ಬಿ.ಎ, ಬಿ.ಕಾಂ, ಬಿ.ಎಸ್ಸಿ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಅಂಚೆ ಮೂಲಕ ತರಿಸಿಕೊಳ್ಳುವ ಅಭ್ಯರ್ಥಿಗಳು,

Dr. G. N. Upadhya, Head, Department of Kannada, University of Mumbai, Ranade Bhavan, Vidyanagari, Santacruz (East), Mumbai - 400098 (Tel. No. 26543530, 26543469, 26543345)

E-mail : kannadadepartment@gamil.com (University Website : www.mu.ac.in)

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅರ್ಹ ವಿದ್ಯಾರ್ಥಿಗಳಿಗೆ ಮಾಸಿಕ ಎರಡು ಸಾವಿರ ರೂಪಾಯಿ ಹಾಗೂ ಕರ್ನಾಟಕ ಸಂಘ ಮುಂಬಯಿ ವಾರ್ಷಿಕ ಮೂರು ಸಾವಿರ ರೂ. ವಿದ್ಯಾರ್ಥಿವೇತನ ನೀಡುತ್ತಿದೆ. ಮೇಲಿನ ಈ ವಿಳಾಸಕ್ಕೆ, ಸ್ವ ವಿಳಾಸ ಹೊಂದಿದ ಹತ್ತು ರೂಪಾಯಿಗಳ ಸ್ಟಾಂಪ್ ಹಚ್ಚಿದ ಕವರುಗಳನ್ನು ಲಗತ್ತಿಸಿ ವ್ಯವಹರಿಸಬೇಕು. ತುಂಬಿದ ಅರ್ಜಿಯನ್ನು ಜುಲೈ ತಿಂಗಳ ದಿನಾಂಕ 20ರೊಳಗೆ ತಲುಪುವಂತೆ ಕಳುಹಿಸಿಕೊಡಲು ವಿಭಾಗದ ಪ್ರಕಟಣೆ ತಿಳಿಸಿದೆ.

## ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೋಮಾ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವು ಕನ್ನಡೇತರರಿಗಾಗಿ, ಕನ್ನಡ ಬಾರದವರಿಗೆ ಪ್ರತಿವರ್ಷದಂತೆ ಈ ವರ್ಷವೂ ಕನ್ನಡ ಸರ್ಟಿಫಿಕೇಟ್ ತರಗತಿಗಳನ್ನು ನಡೆಸಲು ಉದ್ದೇಶಿಸಿದೆ. ಕನ್ನಡ ಕಲಿಯ ಬಯಸುವ ಆಸಕ್ತರು ಈ ತರಗತಿಗೆ ಸೇರಿಕೊಳ್ಳಬಹುದು. ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಸಿ. ಉತ್ತೀರ್ಣರಾಗಿರಬೇಕು.

ಕನ್ನಡ ಸ್ನಾತಕೋತ್ತರ, ಡಿಪ್ಲೋಮಾ ಪ್ರಾರಂಭವಾಗಿದ್ದು ಪದವೀಧರರು ಇದಕ್ಕೆ ಸೇರಲು ಅರ್ಹರಾಗಿರುತ್ತಾರೆ. ಆಸಕ್ತರು ವಿವರಗಳಿಗಾಗಿ ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ವಿದ್ಯಾನಗರಿ, ಸಾಂತಾಕ್ರೂಜ್ (ಪೂರ್ವ), ಮುಂಬಯಿ - 400098 ಈ ವಿಳಾಸವನ್ನು ಸಂಪರ್ಕಿಸಲು ಕೋರಲಾಗಿದೆ. ಕಲಿನಾ, ನವಿಮುಂಬಯಿ ಹಾಗೂ ಪನ್ವೇಲ್ ಕೇಂದ್ರಗಳಲ್ಲಿ ಕನ್ನಡ ಕಲಿಕಾ ಯೋಜನೆಗೆ ಅವಕಾಶವಿದೆ.

ಆಸಕ್ತರು ಜುಲೈ 30 ರೊಳಗೆ ವಿಭಾಗವನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಕನ್ನಡ ವಿಭಾಗದ ದೂರವಾಣಿ ಸಂಖ್ಯೆ 26543530, 26543345, 26543469 ಸಂಪರ್ಕಿಸಬಹುದಾಗಿದೆ. ಪನ್ವೇಲ್‌ನಲ್ಲಿ ಕನ್ನಡ ಕಲಿಯಲು ಬಯಸುವವರು ಮನೋರಮಾ ಶೆಟ್ಟಿ 9324305298, ಸುರೇಶ್ ರಾವ್ 9769359421, ಅರುಣ್ ಶೆಟ್ಟಿ 9322668488 ಇವರನ್ನು ಸಂಪರ್ಕಿಸಬಹುದು.

# ರ್‍ಯಾಂಕು ಮತ್ತು ಇಂದಿನ ಶಿಕ್ಷಣ

ಪಿ.ಯು.ಸಿ. ಮತ್ತು ಹತ್ತನೇ ತರಗತಿ ಫಲಿತಾಂಶ ಪ್ರಕಟವಾದ ದಿನದಿಂದ ಪತ್ರಿಕೆಗಳಲ್ಲಿ ರ್‍ಯಾಂಕು ವಿಜೇತರ ಪಟ್ಟಿಯೇ ಬರುತ್ತದೆ. ಅವರನ್ನು ರ್‍ಯಾಂಕು ಪಡೆಯಲು ಸಿದ್ಧಮಾಡಿದ ಕೋಚಿಂಗ್ ಕ್ಲಾಸ್‌ಗಳ ದೊಡ್ಡ ದೊಡ್ಡ ಬ್ಯಾನರ್‌ಗಳು ಈ ಸಮಯದಲ್ಲಿ ಅಲ್ಲಲ್ಲಿ ಕಾಣಸಿಗುವುದು ಸಾಮಾನ್ಯ. ಅದೇನೇ ಇರಲಿ ನನ್ನನ್ನು ಕಾಡುವ ಒಂದೇ ಪ್ರಶ್ನೆ.. ಪ್ರತಿ ವರ್ಷ ಇಷ್ಟೆಲ್ಲಾ ಪ್ರತಿಭಾವಂತರು ಪಾಸಾಗಿ ಬರುತ್ತಾರೆ. ಇಂತಹ ರ್‍ಯಾಂಕು ವಿಜೇತರು ಎಲ್ಲಿ ಹೋಗಿದ್ದಾರೆ? ದೇಶಕ್ಕೆ ಉಪಕಾರಿಯಾಗಿದ್ದಾರೆಯೇ? ಅಥವಾ ಕೇವಲ ತಮ್ಮ ಜೀವನೋಪಾಯವನ್ನೇ ಹುಡುಕಿಕೊಂಡು ಪರದೇಶದ ಹಾದಿ ಹಿಡಿದಿದ್ದಾರೆಯೇ?

ನನಗೆ ತಿಳಿದಿರುವ ಪ್ರಕಾರ ಒಂದು ಕ್ಲಾಸಿನಲ್ಲಿ 60 ಮಂದಿ ವಿದ್ಯಾರ್ಥಿಗಳಿದ್ದರೆ ರ್‍ಯಾಂಕು ಪಡೆಯುವವರು ಒಂದೋ ಎರಡು ಮಂದಿ. ಉಳಿದವರು ಉತ್ತಮ ದರ್ಜೆಯಲ್ಲಿ ಪಾಸಾದರೂ ಸ್ಪರ್ಧಾತ್ಮಕ ಜಗತ್ತಿನ ಆತಂಕಗಳು ಅವರನ್ನು ಕಾಡದೇ ಬಿಡದು. ಮುಂದಿನ ವ್ಯಾಸಂಗಕ್ಕೆ ಪ್ರವೇಶ, ಅಲ್ಲಿರುವ ಕಟ್‌ಅಪ್ ಮಾರ್ಕ್ಸ್ ಇವೆಲ್ಲಾ ವಿದ್ಯಾರ್ಥಿಗಳನ್ನು ಚಿಂತೆಗೀಡುಮಾಡುತ್ತದೆ. ಮುಖ್ಯವಾಗಿ ಪೋಷಕರ ಬಿ.ಪಿ. ಹೈ ಮಾಡುವ ಪ್ರಸಂಗಗಳು ಇವು. ಮೂರು ನಾಲ್ಕು ಕಡೆ ಅಪ್ಲಿಕೇಶನ್ ಹಾಕಿ ಇಡಬೇಕಾದ ಪ್ರಸಂಗಗಳು. ಆನ್‌ಲೈನ್ ತೊಂದರೆಗಳು ಇವೆಲ್ಲಾ ಕಾಡುವ ಸಂಗತಿಗಳು. ಜನಸಂಖ್ಯೆ ಹೆಚ್ಚಾಗಿರುವ ಸ್ಪರ್ಧಾತ್ಮಕ ಬದುಕಿನಲ್ಲಿ ಇದನ್ನು ತಪ್ಪಿಸಲು ಕಷ್ಟಸಾಧ್ಯ.

ನಾವಿಂದು ವಿದ್ಯಾರ್ಥಿಗಳನ್ನು ಹಣ ಸಂಪಾದನೆಯ ದೃಷ್ಟಿಯಿಂದ ತಯಾರಿಸುತ್ತಿದ್ದೇವೆ. ವೃತ್ತಿಪರ ಶಿಕ್ಷಣ, ಐಟಿ, ಇಂಜಿನಿಯರಿಂಗ್, ಮೆಡಿಕಲ್ ಇವು ನಮ್ಮ ಆದ್ಯತೆಗಳಾಗಿವೆ. ಅವು ಎಟುಕದಿದ್ದಾಗ ಸಿ.ಎ, ಎಂ.ಬಿ.ಎ, ಸಿ.ಎಸ್ ಇವುಗಳನ್ನು ನಮ್ಮದಾಗಿಸುತ್ತೇವೆ. ಒಂದು ಕಾಲದಲ್ಲಿ ಐಟಿ ಹುಚ್ಚು ಎಷ್ಟಾಗಿತ್ತೆಂದರೆ ಮನೆಯಲ್ಲಿದ್ದ ಇಬ್ಬರೂ ಮಕ್ಕಳೂ ಐಟಿ ಇಂಜಿನಿಯರ್. ಅದೇ ಪರಿಸ್ಥಿತಿ ಈಗ ಎಂ.ಬಿ.ಎ.ಗೆ ಬಂದು ನಿಂತಿದೆ. ಸದ್ಯ ಇಂತಹ ಎಂಬಿಎಗಳು ಯಾರಿಗೂ ಬೇಡವಾದ ಪರಿಸ್ಥಿತಿಯಲ್ಲಿದ್ದೇವೆ. ಆದರೂ ಕಾಡುವ ಪ್ರಶ್ನೆ ಮತ್ತಿನ್ನೇನು ಮಾಡಲೀ?

ಹಣವನ್ನೇ ದೃಷ್ಟಿಯಲ್ಲಿಟ್ಟುಕೊಂಡಾಗ ಯಾವ ದಿಕ್ಕು ಕಾಣದೆ ಇರಬಹುದು. ಪ್ರತಿಯೊಂದು ವಿಶ್ವವಿದ್ಯಾಲಯ ವಿಭಾಗಗಳಲ್ಲಿ ಅದೆಷ್ಟೋ ವಿಷಯಗಳ ಬಗ್ಗೆ ಅಧ್ಯಯನ ಪೀಠಗಳಿವೆ. ಸರ್ಕಾರ ಅವುಗಳನ್ನು ಬೆಳೆಸುವುದರಲ್ಲಿ ವಿಶೇಷ ಆಸ್ಥೆ ವಹಿಸುತ್ತಿದೆ. ಅಲ್ಲಿರುವುದು ವಿದ್ಯಾರ್ಥಿಗಳ ಕೊರತೆ ಜ್ಞಾನದ ನಾನಾ ಆಯಾಮಗಳು ಇಲ್ಲಿ ತೆರೆದುಕೊಳ್ಳುತ್ತದೆ. ವೃತ್ತಿ ಶಿಕ್ಷಣದೊಂದಿಗೆ ಜೀವನ ಸಂತೋಷಕ್ಕಾಗಿ ಇಂತಹ ಸಂಶೋಧನೆ ಅಧ್ಯಯನಗಳಲ್ಲಿ ದುಡಿಸಿಕೊಂಡರೆ ಜೀವನ ಮೌಲ್ಯ ವರ್ಧನೆಯಾಗಬಹುದೆಂಬ ಆಶಯ.

**ರ್‍ಯಾಂಕು, ಅಂಕಗಳು ಅನಿವಾರ್ಯವೇ?**

ಹೌದು, ಇಂದಿನ ಸ್ಪರ್ಧಾತ್ಮಕ ಜೀವನದಲ್ಲಿ ಕೆಲಸ ಗಿಟ್ಟಿಸಬೇಕಾದರೆ ಅನಿವಾರ್ಯವಾಗಿದೆ. ಆದರೆ, ರ್‍ಯಾಂಕು, ಅಂಕಗಳನ್ನು ಗಳಿಸುವುದೇ ಜೀವನ ಅಲ್ಲ. 'ನೀನು ಫೇಲು' ಎಂಬ ತಮಾಷೆಯ ಕರೆಗೆ ಹತ್ತನೇ ತರಗತಿಯ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಳು. ಇಂತಹ ವಿದ್ಯೆಯಿಂದ ನಮ್ಮ ಸಮಾಜಕ್ಕೆ ಏನೂ ಲಾಭವಿಲ್ಲ. ನಮಗೆ ಬೇಕಾಗಿರುವುದು ವಿದ್ಯಾರ್ಥಿಗನ್ನು ಬೆಳೆಸುವ ಶಿಕ್ಷಣ ಕ್ರಮ. ಅವರ ಜೀವನವನ್ನು ರೂಪಿಸುವ, ಸ್ವಂತಿಕೆಯನ್ನು, ಚತುರತೆಯನ್ನು, ಜೀವನ ಮೌಲ್ಯಗಳನ್ನು ಹೆಚ್ಚಿಸುವ ವಿದ್ಯಾಭ್ಯಾಸ ಕ್ರಮ. ಅವರನ್ನು ಅಳಿಸುವ ಶಿಕ್ಷಣ ಕ್ರಮ ಎಂದೂ ಒಳಿತಲ್ಲ. ಯಾವತ್ತೋ ಹೇಳಿದ ಮಕಾಲೆ ಪದ್ಧತಿಗೆ ನೇಣು ಹಾಕಿಕೊಂಡ ನಮ್ಮ ಶಿಕ್ಷಣ ಪದ್ಧತಿ ಇನ್ನೂ ಗಂಟು ಬಿಡಿಸಿಕೊಂಡು ಬದಲಾಗದ ಸ್ಥಿತಿಯಲ್ಲಿದೆ.

**ಘಟನೆ :**

ನಾನು ಅಂತಿಮ ಬಿ.ಕಾಂ. ನಲ್ಲಿದ್ದಾಗ ಒಬ್ಬಾಕೆಯ ರ್‍ಯಾಂಕ್ ಎರಡು ಅಂಕಗಳಿಂದ ತಪ್ಪಿಹೋಯಿತು. ಆಕೆ ವೆರಾಂಡದಲ್ಲೇ ಗೋಳೋ ಎಂದು ಅಳಲಾರಂಭಿಸಿದಳು. ವಿಚಾರಿಸಿದಾಗ ವಿಷಯ ತಿಳಿಯಿತು. ಅವಳನ್ನು ಸಮಾಧಾನ ಮಾಡಿಸಬೇಕಾದರೆ ಕಷ್ಟವಾಯಿತು. ಅಷ್ಟರಲ್ಲೇ ಇನ್ನೊಬ್ಬ ಗೆಳೆಯ ಸಿಹಿ ತಿಂಡಿ ತಂದು ಹಂಚಿದ. ಎಷ್ಟು ಮಾರ್ಕ್ಸ್ ನಿನಗೆ ಅಂತ ಕೇಳಿದೆ. "ಎಲ್ಲಾ ಕ್ಲೀಯರ್ ಮಾಡಿದ್ದೇನೆ" ಎಂದಾಗ ಅವನ ಮುಖದಲ್ಲಿ ಖುಷಿ ಇತ್ತು. ಇಂದಿನ ಸಮಯದಲ್ಲಿ ಆತ ಹುಟ್ಟೂರಿನಲ್ಲಿಯೇ ಇದ್ದುಕೊಂಡು ವ್ಯಾಪಾರ ಮಾಡಿ ಸುಖಕರ ಜೀವನ ನಡೆಸುತ್ತಿದ್ದಾನೆ. ಈಕೆ ದೂರದ ಕೆನಡಾದಲ್ಲಿ ಹಾರಿ ಕೂತಿದ್ದಾಳೆ. "ಇಂಡಿಯಾಕ್ಕೆ ಬಂದರೆ ನನಗೆ ನೋವು ಕೊಡುತ್ತದೆ" ಕಳೆದೊಂದು ವರ್ಷದಿಂದ ಸಂಪರ್ಕ ಕಡಿದು ಹೋಗಿದೆ.



✍ ಅಶೋಕ್ ಕುಮಾರ್ ವಳದೂರ್

ರ್‍ಯಾಂಕು, ಅಂಕಗಳು ಬರಲಿ. ಜೀವನವೆನ್ನುವುದು ಅಗಾಧ ಸಾಗರ, ಪಠ್ಯಪುಸ್ತಕಗಳು ಅಲ್ಲಿ ಲಭ್ಯವಿಲ್ಲ. ಅನುಭವವೇ ಗುರು ಅಲ್ಲಿ. ಅದನ್ನು ಈಜಿ, ಜೈಸಿ.

"ಈಸಬೇಕು ಇದು ಜೈಸಬೇಕು"

---

### ಪ್ರಾಮಾಣಿಕ ಶಿಕ್ಷಕ

''ತನ್ನ ಪುತ್ರ, ನಕಲು
ಮಾಡಿದ್ದನ್ನೂ''
''ಧರ್ಮ''ವೆಂದೇ ಸಾಧಿಸುವ
ಶ್ರೀಮಂತನಿಗೆ
''ನನ್ನದು ತಪ್ಪಾಯಿತು''
ಎಂದು ಕ್ಷಮೆ ಕೇಳುವವ !

### ಬೆಲೆಯೇರಿಕೆ

ಧೋ ಧೋ ಮಳೆ ಬಂತು
ಅದರ ಜೊತೆಗೆ
ಧೋ ಧೋ
ಬೆಲೆ ಯೇರಿಕೆ ಕೂಡಾ !

– ಶೋಭಾ ಪ್ರಮೋದ್

---

## ...ಹರಿಕಾರ 'ಟಿ.ಪಿ. ಕೈಲಾಸಂ'

ತಟ್ಟೇಲಿ ತಿನ್ನಬೇಕು, 9) ವ್ಯಕ್ತಿ ಸಮಾಜಕ್ಕೆ ಹೊರತು ಸಮಾಜ ವ್ಯಕ್ತಿಗಲ್ಲ, 10) ಸುಸ್ತಾದಾಗ ಸುದ್ಧಾರಿಸಕೊಳ್ಳೊದಕ್ಕೆ Sidewings ಇದ್ದಾಗೆ ಸಮಾಜದಲ್ಲಿ ಇಲ್ಲ.

ಇಂಥಹ ಅತ್ಯದ್ಭುತ ನಾಟಕಗಳನ್ನು ನೀಡಿದ ಕೈಲಾಸಂರವರು 1945ರಲ್ಲಿ ಮದ್ರಾಸ್‌ನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. "ನಗು ಬದುಕು ಅಳು ಸಾವು" ಇವರು ನೀಡುತ್ತಿದ್ದ Autograph. ಕನ್ನಡ ರಂಗಭೂಮಿ ಮರೆಯಲಾಗದ ನಟ-ನಾಟಕಕಾರ ಕೈಲಾಸಂರವರು 1946ರ ನವೆಂಬರ್ 23ರ ರಾತ್ರಿ ಮಲಗಿದವರು 24ರ ಬೆಳಿಗ್ಗೆ ಇರಲಿಲ್ಲ.

ಇವರ ನಾಟಕಗಳನ್ನು ಓದಬೇಕು. ಹಾಗೂ ಸಾಧ್ಯವಾದಷ್ಟು ಆಡಬೇಕು. ಈ ನಾಟಕಕಾರ 'ಕೈಲಾಸಂ' ಪ್ರತಿಫಲ ಕೇಳಿದ್ದು ಹೀಗೆ,

"ಹೊನ್ನೆ? ಬಲ್ ಬಿರುದುಗಳೆ? ಹಾಲುಗಲ್ ವಿಗ್ರಹವೇ?
ಕಲಿ ಬಯಸನಿಂಥದೇ ಪ್ರತಿಫಲವೇ ಬೇಕು.
ಹಿರಿಯರುಂ ಕಿರಿಯರುಂ ಕಿಲಕಿಲನೆ ನಕ್ಕೆರಡು
ಕಣ್ಣ ಹನಿಯಿತ್ತರೆ ನನಗದುವನಿತೆ ಸಾಕು".

■

## ಜೀವಿ ವಚನ-57

# ಸತ್ಯಕ್ಕೆ ಹಲವು ಮುಖ

1

ಜನನ–ಮರಣ ಒಂದು ಚಕ್ರ, ಬಿಡಿಸಿಕೊಂಡವನೆ ಮುಕ್ತ.
ಮತ್ತೆ ಮತ್ತೆ ಹುಟ್ಟು ಇದೆ; ನಂಬಿದರೆ ನಂಬಿ, ನಂಬದಿದ್ದರೆ ಬಿಡಿ.
ಪುನರ್ಜನ್ಮ ಇದು ಜೀವಗಳ ಹಣೆಬರಹ, ಅಳಿಸಲಾಗದ ಸತ್ಯ.
ಅದನ್ನು ನೀವು ಸತ್ಯವೆಂದರೂ ಸತ್ಯ, ಮಿಥ್ಯೆ ಎಂದರೂ ಸತ್ಯ.
ಬುದ್ಧನಿಗಿತ್ತು ನೂರು ಜನ್ಮಗಳ ಸ್ಮರಣೆ, ನಮಗೆ ಇಲ್ಲ, ಇದೂ ಸತ್ಯ.

2

ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವಚಾರ್ಜುನ  ಎಂದ ಕೃಷ್ಣ.
ನರನದು ಮರುಹುಟ್ಟು, ಆದರೆ ನಾರಾಯಣನದು ಪುನರಾವತಾರ.
ಜನುಮಮರಣದ ಲೀಲೆ, ಎಲ್ಲದಕ್ಕೂ ಅವನೇ ಸೂತ್ರಧಾರ.
ಮತ್ತೆಮತ್ತೆ ಸಾಯುವ ಶರೀರ, ಬದಲುಮಾಡುವ ಹಳೆಯ ಬಟ್ಟೆ.
ಉಟ್ಟು ಹರಿಯುವ ದೇಹಕಾಗಿ ಯಾಕೆ ಶೋಕ, ಯಾಕೆ ಮೋಹ?

3

ಆದಿ ಗೊತ್ತಿಲ್ಲ, ಅಂತ ಗೊತ್ತಿಲ್ಲ; ಮಧ್ಯದಲ್ಲಿ ಇರುವದೇ ಜೀವನ.
ನಾ ತೊಟ್ಟ ದೇಹಗಳ ಲೆಕ್ಕ/ ಇಡುವವರ ಸೊಕ್ಕ/ ಯಮಃ ನೋಡಿ ನಕ್ಕ
ಎಂದು ಹಾಡಿದರು ಬೇಂದ್ರೆ: ಮುಗಿಯದ ಕಾಳಕ್ಕ/ ಜನುಮಗಳ ಮ್ಯಾಳಕ್ಕ/
ಕುಣಿಯೋಣು ಬಾ ಎಂದು ಸಖಿಗೆ ಕರೆದ ವರಕವಿ ದತ್ತ. ನಿನ್ನೆಗಳ ಮರೆತು,
ನಾಳೆಗಳ ತೊರೆದು, ಇಂದು ಇರುವುದೇ ನಿಜ ಬಾಳುವೆಯ ಗುಟ್ಟು.

4

ಹುಟ್ಟದೇ ಇರುವವರು ಸಾಯುವುದೆ ಇಲ್ಲ, ಬರೆಯದ ಪುಸ್ತಕವ ಓದಿದವರಿಲ್ಲ.
ಜಾತಸ್ಯ ಮರಣಂ ಧ್ರುವಂ; ಹುಟ್ಟು ಎಷ್ಟು ಸತ್ಯವೋ ಸಾವೂ ಅಷ್ಟೇ ಸತ್ಯ.
ಮಧ್ಯದಲ್ಲಿರುವ ಬಾಳು ಕೂಡ ಸತ್ಯ, ಮಿಥ್ಯೆ ಎಲ್ಲಿದೆ ಹುಡುಕಲು?
ಸೋಹಂ  ಎಂದರೆ ಅಹಂಕಾರ,  ಕೋಹಂ ಎಂದರೆ ಸಂಶಯ, ದಾಸೋಹಂ,
ಶಿಷ್ಯಸ್ತೇಹಂ ಅನ್ನುವುದೇ ಕ್ಷೇಮ; ಮಾತುಕೊಡು,  ಕರಿಷ್ಯೇ ವಚನಂ ತವ
ಎಂದು.



– ಡಾ। ಜೀವಿ ಕುಲಕರ್ಣಿ
(M: 9324242172)

(ಸ್ವಾಮಿ ಜಗದಾತ್ಮಾನಂದರ 'ಬದುಕಲು ಕಲಿಯಿರಿ' ಅಧ್ಯಾ೦ಯ ಐದರಿಂದ ಸ್ಫುರಿಸಿದ್ದು)

# ವಿದ್ವಾನ್ ವೀಣೆ ಸುಬ್ಬಯ್ಯ

## (ವೀಣಾ ವಾದಕರು)



1854 ರಲ್ಲಿ ಪ್ರಖ್ಯಾತ ಸಂಗೀತಗಾರರಾಗಿದ್ದ ದೊಡ್ಡ ಶೇಷಣ್ಣನವರ ಹಿರಿಯ ಪುತ್ರರೇ ವೀಣೆ ಸುಬ್ಬಣ್ಣನವರು. ತಂದೆಯವರಿಂದಲೇ ಮೊದಲ ಪಾಠ - ಪ್ರವಚನಗಳು. ಹುಟ್ಟಿನಿಂದಲೇ ಶ್ರೀಮಂತರಾಗಿದ್ದ ಶ್ರೀಯುತರು ಸಂಗೀತ ಅಭ್ಯಾಸದ ಜೊತೆಯಲ್ಲಿಯೇ 'ಮೈಸೂರಿನ ರಾಯಲ್ ಸ್ಕೂಲ್'ನಲ್ಲಿ ವಿದ್ಯಾಭ್ಯಾಸ. ಅರಸು ಮನೆತನದವರ ಒಡನಾಟ. ವೀಣಾವಾದನದ ಜೊತೆಯಲ್ಲಿಯೇ ಮೈಸೂರು ಸದಾಶಿವರಾಯರಿಂದ ಗಾಯನ ಪಾಠ. ಒಡನಾಡಿ ಶೇಷಣ್ಣನವರು. ಸದಾಶಿವರಾದರೂ ಸಾಮಾನ್ಯರಲ್ಲ. ತ್ಯಾಗರಾಜರ ಪ್ರಶಿಷ್ಯರು. ಸ್ವಭಾವತಃ ಉತ್ತಮ ಸಾಧಕರಾದ ಸುಬ್ಬಣ್ಣನವರಿಂದ ವಾದನ - ಗಾಯನ ಇವೆರಡರಲ್ಲೂ ಪ್ರಭುತ್ವ ಗಳಿಸಲು ಸಾಧ್ಯವಾಯಿತು. ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್‌ರವರು ಉತ್ತಮ ಕಲಾರಾಧಕರು. ಅಲದೇ ಸ್ವತಃ ಕಲಾವಿದರು. ಮಹಾರಾಜರ ಪಿಟೀಲು ವಾದನ, ಶೇಷಣ್ಣವರ ವೀಣೆ, ಸುಬ್ಬಣ್ಣನವರ ಗಾಯನ ಅಪೂರ್ವ ಶೋಭೆಯಿಂದ ಪ್ರದರ್ಶಿಸಲ್ಪಡುತ್ತಿತ್ತು. ಆಗರ್ಭ ಶ್ರೀಮಂತರಾಗಿದ್ದ ಸುಬ್ಬಣ್ಣನವರು ಕಲಾಶ್ರೀಮಂತಿಕೆಯ ಜೊತೆಗೆ ಹೃದಯ ಶ್ರೀಮಂತಿಕೆಯನ್ನೂ ಹೊಂದಿದ್ದರು. ಅನೇಕ ಹೊರನಾಡ ವಿದ್ವಾಂಸರಿಗೆ ಇವರಿಂದ ಸನ್ಮಾನಗಳು ನಡೆದಿವೆ. ಅದರಲ್ಲಿ ಮಹಾವೈದ್ಯನಾಥ ಅಯ್ಯರ್ ಪ್ರಮುಖರು.

ಇಂತಹ ಉದಾರಿಯಾದ ಕಲಾವಿದನಿಗೆ ಸಂತಾನವಿಲ್ಲದಿದ್ದರೂ ಶಿಷ್ಯರನ್ನೇ ಮಕ್ಕಳಂತೆ ಪ್ರೀತಿಸುತ್ತಿದ್ದರು. ಇವರಿಂದ ಶಿಕ್ಷಣ ಪಡೆದವರಲ್ಲಿ ಚಿಕ್ಕರಾಮರಾಯರು, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಸ್ವರಮೂರ್ತಿ ವಿ.ಎನ್. ರಾವ್ ಪ್ರಮುಖರು. ಮತ್ತೆ ಅನೇಕರಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಾರ್ಗದರ್ಶಕರಾಗಿದ್ದರು.

ಅವರ ಹೃದಯ ಶ್ರೀಮಂತಿಕೆಗೆ ಮತ್ತೊಂದು ಉದಾಹರಣೆ, ಅವರೆಷ್ಟೇ ದೊಡ್ಡ ಕಲಾವಿದರಾಗಿದ್ದಾಗ್ಯೂ ಚಿಕ್ಕವರ ಕಛೇರಿಯನ್ನು ಕುಳಿತು ಕೇಳಿ ಆನಂದಿಸುವ ಹಿರಿಯತನ ಅವರಲ್ಲಿತ್ತು.

ಹುಟ್ಟಿದವರೆಲ್ಲಾ ಸಾಯಲೇ ಬೇಕು. ಆದರೆ, 1939ನೇ ಇಸವಿ ಜುಲೈ ತಿಂಗಳ ದಿನಾಂಕ 13ರಂದು (ಪ್ರಮಾದಿ ಸಂವತ್ಸರ ಆಷಾಢ ಬಹುಳ ಏಕಾದಶಿ) ಅವರು ಅಗಲಿದಾಗ ಸಂಗೀತ ಸಾಧಕರ ಸಂಖ್ಯೆ ಕುಂಠಿತವಾಯಿತು.

ಕೃಪೆ - ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು
ಸಂ. - ಪ್ರೊ. ಮೈಸೂರು ವಿ. ಸುಬ್ರಹ್ಮಣ್ಯ

### ಬಯಕೆ

**ಚಿಗುರಿತು ಬಯಕೆ ಮನದಲ್ಲೊಂದು**
**ನಿನ್ನ ಆ ದಿನ ಕಂಡೆನಲ್ಲೆಂದು**
**ಆವರಿಸಿಕೊಂಡಿತು ಮೈಮನಕ್ಕೆ ನಿನ್ನ ಹೆಸರಂದು**
**ತಿಳಿಯಿತು ವಿಷಯ ಈ ದಿನದಂದು**
**ಅಯ್ಯೊ ಮಂಕೆ ಹೆಸರಲೆನ್ನಿದೆ ಎಂದು**
**– ಸಿಂದು ಎಸ್. ಪಿ. ಸಖರಾಯಪಟ್ಟಣ**

(ಕಳೆದ ಸಂಚಿಕೆಯಿಂದ)

# ಶ್ರೀ ಅಷ್ಟವಿನಾಯಕ ದರ್ಶನ

**ಅರ್ಥ -** ಯಾವ ಗಣೇಶ ಭಕ್ತರು ಎಂಟು ಜನ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಈ ಅಥರ್ವ ಶಿರ್ಷ ಜಪವನ್ನು ಉತ್ತಮ ರೀತಿಯಿಂದ ಹೇಳಿಕೊಡುತ್ತಾರೋ ಅವರು ಸೂರ್ಯನಂತೆ ತೇಜಸ್ವಿಯಾಗುವರು. ಸೂರ್ಯ ಗ್ರಹಣ ಸಮಯದಲ್ಲಿ ಗಂಗಾ, ಯಮುನೆ, ಕೃಷ್ಣ, ಗೋದಾವರಿ ಮುಂತಾದ ಮಹಾನದಿಗಳಲ್ಲಿ ನಿಂತು ಅಥವ ಗಣಪತಿ ಮೂರ್ತಿಯ ಬಳಿ ಕುಳಿತು ಈ ಜಪವನ್ನು ಒಂದು ಸಹಸ್ರ ಅಥವಾ ಒಂದು ಲಕ್ಷ ಬಾರಿ ಪಠಿಸುವರೋ ಅಂತಹವರಿಗೆ ಇದು ಸಿದ್ಧ ಮಂತ್ರ ಎಂದರೆ ಅವರಿಗೆ ಈ ಮಂತ್ರದ ಫಲ ತತ್ಕಾಲದಲ್ಲಿ ಸಿಗುತ್ತದೆ. ಈ ಜಪ ಮಾಡುವವರು ಎಂತಹ ವಿಘ್ನಗಳಿಂದಲೂ ಮುಕ್ತರಾಗುವರು. ಎಲ್ಲಾ ದೋಷಗಳಿಂದಲೂ, ಪಾತಕಗಳಿಂದಲೂ ಇವರು ಮುಕ್ತಿಪಡೆಯುವರು. ಯಾರು ಈ ಅಥರ್ವ ಶೀರ್ಷೆ ಜಪವನ್ನು ಬಾಯಿಪಾಠ ಮಾಡುವರೋ ಅವರು ಸರ್ವ ಜ್ಞಾನಿಯಾಗುತ್ತಾರೆ.

**ಶ್ಲೋಕ -** ಓಂ ಸಹನಾ ಭವತು ಸಹಸೌಭುನತ್ತು ಸಹವೀರ್ಯಂ ಕರವಾವಹೈ

ತೇಜೋಸ್ವಿನಾ ವಧೀ ತಮಸ್ತುಮಾ ವಿದ್ವಿ ಷಾವಹೈ

**ಅರ್ಥ -** ಈ ಜ್ಞಾನವು ನಮ್ಮನ್ನು ರಕ್ಷಿಸಲಿ. ಈ ಜ್ಞಾನವು ನಮ್ಮಿಬ್ಬರಿಗೂ ಸಮರೂಪದಲ್ಲಿ ಉಪಯುತ್ತವೆನಿಸಲಿ. ನಾವಿಬ್ಬರೂ ಸೇರಿ ಏನಾದರೂ ಪರಾಕ್ರಮ ಕೈಗೊಳ್ಳೋಣ. ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ. ನಾವು ಯಾವಾಗಲೂ ಒಬ್ಬರನ್ನೊಬ್ಬರು ತೃಣೀಕರಿಸದೇ ಇರೋಣ

ಇದಾದ ನಂತರ ಮತ್ತೊಮ್ಮೆ ಈ ಜಪವನ್ನು 'ಓಂ ಭದ್ರಂ ಕರ್ಣೇಭಿ ಶೃಣುಯಾಂ ದೇವ'

ಈ ಶ್ಲೋಕದಿಂದ ಪ್ರಾರಂಭಮಾಡಿ ಓಂ ಶಾಂತಿ, ಓಂ ಶಾಂತಿ, ಓಂ ಶಾಂತಿವರೆಗೆ ಓದಿ ನಂತರ ಅಥರ್ವ ಶೀರ್ಷವನ್ನು ಪೂರ್ಣ ಮಾಡಿರಿ.

**********

**ಶ್ಲೋಕ -** ಓಂ ನಮೋ ಗಣ್ಯೇಭ್ಯೋ ಗಣಪತಿಮ್ಯಶ್ರಚವೋ| ನಮೋ ನಮೋ ವ್ರತಭ್ಯೋಃ

ವ್ರಾತಪತಿಭ್ಯಶ್ರಚವೋ ನಮೋ ನಮೋ ವಿರೂಪೇಭ್ಯೋಶ್ರಚವೋ ನಮಃ (ಯಜುರ್ವೇದ)


**ಅರ್ಥ -** ಜನಸಮುದಾಯಕ್ಕೂ ಮತ್ತು ಜನಾಧಿಪತಿಗೂ ನಾನು ನಮಸ್ಕಿರುಸುವೆನು. ವ್ರತ ಪಾಲನೆಯನ್ನು ಮಾಡುವವರಿಗೂ ಮತ್ತು ವ್ರತಪಾಲನೆ ಮಾಡುವ ಸಮೂಹದ ಅಧಿಪತಿಗೂ ನನ್ನ ಪ್ರಣಾಮಗಳು ಸ್ವೀಕಾರವಾಗಲಿ. ವಿಶಿಷ್ಟ ಅಥವಾ ವಿಶೇಷ ರೂಪಧಾರಣೆ ಮಾಡುವ ಆ ವಿರೂಪ ಶ್ರೀ ಗಣೇಶರಿಗೆ ನನ್ನ ನಮಸ್ಕಾರಗಳು.

## ಗಣೇಶನ ಪೂಜೆಗೆ ಅರ್ಹವಾದ ಇಪ್ಪತ್ತೊಂದು ಪತ್ರಗಳು

(೧) ಹರಳೀ ಪತ್ರಿ (ದೂರ್ವ) (೨) ಭೃಂಗರಾಜ (೩) ಶಂಖಾವಲಿ (೪) ಮರುವಕ (೫) ತುಳಸಿ (೬) ಅಪಮಾರ್ಗ (೭) ದತುರ (೮) ಜಾಜಿ (೯) ಮಧುಮಾಲತಿ (೧೦) ಕೇದಿಗೆ ೧೧) ಬ್ರಹತೀ (೧೨) ಅರ್ಕ (೧೩) ಬಿಲ್ವ (೧೪) ಬದರ್ (ಬೇರೆ ಅಥವಾ ಬೋರೇ ಗಿಡದ ಎಲೆ) (೧೫) ಬಿಟ್ಟೀ (೧೬) ದಾಳಿಂಬೆ (೧೭) ಅಶ್ವತ್ಥ (೧೮) ಹಾದಗ (೧೯) ಶಮಿ ೨೦) ಅರ್ಜುನ (೨೧) ದೇವದಾರು.

## ಚತುರ್ಥಿಯ ಮಹಾತ್ಮೆ

ಶ್ರೀ ವಿಷ್ಣುವಿಗೆ ಏಕಾದಶಿ, ಈಶ್ವರನಿಗೆ ಶಿವರಾತ್ರಿ ಅಮವಾಸ್ಯೆ ಹೇಗೆ ವಿಶೇಷವೋ ಹಾಗೆಯೇ ಶ್ರಾ ಗಣೇಶನಿಗೆ ಚತುರ್ಥಿಯು ಆಗಿದೆ. ಶ್ರೀ ಗಣೇಶನಿಗೆ ಚತುರ್ಥಿಯು ಅತ್ಯಂತ ಪ್ರಿಯವಾಗಿದೆ. ಶ್ರೀ ಗಣೇಶನು ಅಥರ್ವ ಶೀರ್ಷದಲ್ಲೂ ಚತುರ್ಥ್ಯಾ ಮನಶ್ನನ ಜಪ ಹೀಗೆಂದು ಚತುರ್ಥಿಯ ನಿರ್ದೇಶವಿದೆ. ಚತುರ್ಥಿ ಎಂದರೆ ತುರಿಯಾವಸ್ಥೆ.ಯಾವ ಗಣಪತಿಯು 'ಅವಸ್ಥಾತ್ರ ಯಾಂತೀತ' ಎಂದರೆ ಜಾಗ್ರತಾವಸ್ಥೆ,



ಸ್ವಪ್ನಾವಸ್ಥೆ ಮತ್ತು ಸುಷುಪ್ತಿ ಈ ಮೂರೂ ಅವಸ್ಥೆಗಳಿಂದ ಆಚೆ ಇರುವನೋ ಅವನು ತುರಿಂ ಅಂದರೆ ನಾಲ್ಕನೆಯ ಅವಸ್ಥೆಯಲ್ಲಿದ್ದಾನೆ. ಈ ಅವಸ್ಥೆಯಲ್ಲಿ ಅವನ ಸ್ವರೂಪದರ್ಶನವಾಗಿ ಸಾಕ್ಷಾತ್‌ಕಾರವಾಗುತ್ತದೆ. ಆದ್ದರಿಂದ ಚತುರ್ಥಿ ವಿಶೇಷ ಮಹತ್ವವುಳ್ಳದ್ದಾಗಿದೆ.

**೧. ಸಂಕಷ್ಟ ಚತುರ್ಥಿ -** ಪ್ರತಿ ತಿಂಗಳು ವದ್ಯ ರೂಪದಲ್ಲಿ ಕೃಷ್ಣ ಪಕ್ಷದಲ್ಲಿ ಚತುರ್ಥಿಯ ದಿನ ಈ ವ್ರತ ಮಾಡಲಾಗುತ್ತದೆ. ಈ ದಿವಸ ಇಡೀ ದಿನ ಉಪವಾಸವಿದ್ದು, ಗಣೇಶನನ್ನು ಪೂಜಿಸಿ ನೈವೇದ್ಯ ಮಾಡಿ ಚಂದ್ರ ದರ್ಶನ ಮಾಡಿದ

✍ ಸಿ. ಆರ್. ಅನ್ನಪೂರ್ಣ

ನಂತರವೇ ಉಪವಾಸ ಬಿಡಬೇಕು. ಯಾವುದೇ ಸಂಕಟ ನಿವಾರಣೆಗಾಗಿ ಈ ವ್ರತವನ್ನು ಮಾಡುವ ವಾಡಿಕೆ ಇದೆ.

**೨. ವಿನಾಯಕ ಚತುರ್ಥಿ -** ಪ್ರತಿ ತಿಂಗಳ ಶುಕ್ಲ ಪಕ್ಷದ ಚತುರ್ಥಿಗೆ ವಿನಾಯಕೀ ಚತುರ್ಥಿ ಎಂದು ಕರೆಯುತ್ತಾರೆ. ಆದರೆ, ಈ ವ್ರತವನ್ನು ಕೈಗೊಂಜರೆ ಮಾರನೆಯ ದಿನ ಈ ವ್ರತ ಪೂರೈಸಿ ಉಪವಾಸ ಬಿಡತಕ್ಕದ್ದು.

**೩. ಅಂಗಾರಿಕ ಚತುರ್ಥಿ -** ಮಂಗಳವಾರ ದಿನದಂದು ಚತುರ್ಥಿ ಬಂದರೆ ಅದನ್ನು ಅಂಗಾರಿಕ ಎಂದು ಹೇಳುತ್ತಾರೆ. ಈ ದಿನ ಸಂಕಷ್ಟ ಚತುರ್ಥಿ ತರಹವೇ ಪೂಜೆ, ಅರ್ಚನೆ ಮಾಡುತ್ತಾ ಉಪವಾಸವಿದ್ದು, ವ್ರತ ಸಮಾಪ್ತವಾಗುವುದು. ಒಂದು ಅಂಗಾರಕ ವ್ರತದ ಮಹಿಮೆಯು ೨೧ ಸಂಕಷ್ಟಿ ವ್ರತ ಮಾಡಿದಷ್ಟು ಮಹತ್ವದ್ದಾಗಿದೆ. ಆದ್ದರಿಂದ ಉಪಾಸಕ ಈ ಅಂಗಾರಿಕ ವ್ರತವನ್ನು ಅವಶ್ಯ ಮಾಡಬೇಕು. ಅಂಗಾರಿಕಾ ವ್ರತದ ಪೌರಾಣಿಕ ಕಥೆ ಹೀಗಿದೆ...

ಭರದ್ವಾಜ ಋಷಿಯ ಪುತ್ರನಾದ ಭೌಮ್ಯನು (ಭೂಮಿಯ ಉದರದಲ್ಲಿ ಹುಟ್ಟಿದ್ದರಿಂದ ಈ ಹೆಸರು ಬಂದಿದೆ) ಗಜಾನನನ್ನು ಪ್ರಸನ್ನಗೊಳಿಸಿ 'ನನ್ನ ದೇಹ ತ್ರಿಲೋಕದಲ್ಲಿ ಪ್ರಖ್ಯಾತಿಯಾಗಲಿ ಮತ್ತು ಯಾವ ಚತುರ್ಥಿಯ ದಿವಸ ನೀವು ...... ಪ್ರಸನ್ನರಾದರೋ ಆ ದಿವಸ ಕಲ್ಯಾಣಕಾರಿಯಾಗಲಿ' ಎಂದು ವರವನ್ನು ಬೇಡಿದನು. ಅದಕ್ಕೆ ಗಜಾನನು ಹೀಗೆಂದನು. "ನಿನ್ನ ಮಂಗಳ ಈ ಹೆಸರು ಪ್ರಖ್ಯಾತವಾಗುವುದು. ನಿನ್ನ ಅಂಗ ವರ್ಣವು ಕೆಂಪು ಇರುವುದರಿಂದ ನಿನ್ನನ್ನು ಜನರು ಅಂಗಾರಿಕ ಎಂಬ ಹೆಸರಿನಿಂದ ಗುರುತಿಸುವರು". ವರವನ್ನು ಪಡೆದ ಮಂಗಳನು ಅದೇ ಸ್ಥಳದಲ್ಲಿ ಗಣಪತಿಯ ದೇವಸ್ಥಾನ ಕಟ್ಟಿಸಿ ಅದರಲ್ಲಿ ಗಣೇಶನ ಸುಂದರ ಮೂರ್ತಿಯನ್ನು ಸ್ಥಾಪಿಸಿದನು. ಆ ಮೂರ್ತಿಗೆ 'ಮಂಗಳ ಮೂರ್ತಿ' ಎಂದು ಹೆಸರಿಟ್ಟನು. ತದನಂತರ ಗಣೇಶನ ದೂತರುಗಳು ಈ ಭೂಮಿ ಪುತ್ರನನ್ನು ವಿಮಾನದಲ್ಲಿ ಕೂರಿಸಿಕೊಂಡು ಶ್ರೀ ಗಣೇಶನ ಚರಣ ಕಮಲಗಳಲ್ಲಿ ತಂದುಬಿಟ್ಟರು. ಚತುರ್ಥಿಯ ದಿವಸ ಗಣಪತಿ ಪ್ರಸನ್ನನಾದನು. ಆದುದರಿಂದ ಭೌಮವಾರ ಅಂದರೆ ಮಂಗಳವಾರ ಬರುವ ಚತುರ್ಥಿಯು ಹೆಚ್ಚಿನ ಮಹಾತ್ಮೆಯುಳ್ಳದ್ದಾಗಿದೆ. ಮಂಗಳ ಮೂರ್ತಿಯ ಈ ಸ್ಥಾನವು

## ಯಾರಾದರೂ ನಂಬುತ್ತಾರಾ



–ಡಾ. ಮರಿಯಪ್ಪ ನಾಟೇಕರ್

ಮುಗಿಲಿಗೆ ಮುತ್ತಿಡುವ ಮಹಲಿನೊಳಗಿನ
ಆಳುಗಳಿಗೆ ಜೀವವಿದೆಯೆಂದರೆ
ಯಾರಾದರೂ ನಂಬುತ್ತಾರಾ?

ಮಳೆ ಗಾಳಿ ಚಳಿಯನು ಸೊಂಟಕೆ ಸುತ್ತಿ
ಹೊಲದ ಮಧ್ಯ ಹಗಲಿರುಳು ದುಡಿಯುತ
ರೈತರಿಗೆ ಜೀವವಿದೆಯೆಂದರೆ
ಯಾರಾದರೂ ನಂಬುತ್ತಾರಾ?

ಕಟ್ಟಡದ ಮೇಲೆ ಕಟ್ಟಡ ಕಟ್ಟಿ
ಕಲ್ಲು ಮಣ್ಣು ಕಟ್ಟಿಗೆ ಸಿಮೆಂಟಿಗೆ
ಸೀರೆಯುಡಿಸಿ ಸಿಂಗರಿಸಿ
ಕಲೆಯನ್ನೆಲ್ಲ ಕಕ್ಕಿ ಕಕ್ಕಿ
ಕುಣಿ ಕುಣಿದಾಡಿದ ಕಣ್ಣುಗಳಿಗೆ
ಜೀವವಿದೆಯೆಂದರೆ
ಯಾರಾದರೂ ನಂಬುತ್ತಾರಾ?

ಮುದಿ ನಾಯಿಯಂತೆ ಕೆಮ್ಮಿ ಕೆಮ್ಮಿ
ಒಡಲ ರಕ್ತ ನೆಲದಗಲ ಚಿಮ್ಮಿ ಚಿಮ್ಮಿ
ಸತ್ತಾಗ ಹೊತ್ತೊಯ್ಯುವ
ಹತ್ತಾರು ಕಾಲುಗಳಿಗಾದರೂ
ಜೀವವಿದೆಯೆಂದರೆ
ಯಾರಾದರೂ ನಂಬುತ್ತಾರಾ?

ಪಾರನೇರ್ ಪಟ್ಟಣದ ಪಶ್ಚಿಮಕ್ಕಿದೆ. ಇದನ್ನೇ ಚಿಂತಾಮಣಿ ಕ್ಷೇತ್ರವೆಂದು ಕರೆಯುತ್ತಾರೆ.

**ಸಂಕಷ್ಟ ನಾಶಂ ಶ್ರೀ ಗಣಪತಿ ಸ್ತೋತ್ರಂ**

ಶ್ರೀ ಗಣೇಶಾಯ ನಮಃ

**ಶ್ರೀ ನಾರದ ಉವಾಚ -** ಪ್ರಣಮ್ಯ ಶಿರಸಾ ದೇವಂ ಗೌರೀ ಪುತ್ರಂ ವಿನಾಯಕಂ||
ಭಕ್ತಾವಾಸಂ ಸ್ಮರೇನ್ನಿತ್ಯಮಾಯುಃ ಕಾಮಾರ್ಥ ಸಿದ್ಧಯೇ ||೧||

**ಅರ್ಥ -** ಭಕ್ತರ ಇಚ್ಛೆಯನ್ನು ಪೂರೈಸುವ ಗೌರೀ ಪುತ್ರ ವಿನಾಯಕನಿಗೆ ಶಿರಬಾಗಿಸಿ ಅವನ ನಿತ್ಯ ಸ್ಮರಣೆ ಮಾಡಿದ್ದೇ ಆದರೆ ನಮ್ಮ ಕಾಮಾರ್ಥಗಳು ಸಿದ್ಧಿಸುವವು.

ಪ್ರಥಮಂ ವಕ್ರತುಂಡಚ್ಚ ಏಕದಂತಂ ದ್ವಿತೀಯಕಂ|
ತೃತೀಯಾ ಕೃಷ್ಣ ಪಿಂಗಾಂಕ್ಷಂ ಜಗವಕ್ರಂ ಚತುರ್ಥಕಂ ||೨||
ಲಂಬೋದರಂ ಪಂಚವನ್ ಚಂಷಷ್ಟಂ ವಿಕಟನೇವಚ್|
ಸಪ್ತಮಂ ವಿಘ್ನರಾಜೇಂದ್ರಂ ಧೂಮ್ರವರ್ಣ ತಥಾಷ್ಟಕಂ ||೩||
ನವಮಂ ಭಾಲಚಂದ್ರಂಚ ದಶಮಂತು ವಿನಾಯಕಂ|
ಏಕಾದಶೀಂ ಗಣಪತಿ ದ್ವಾದಶಂತು ಗಜಾನನಂ ||೪||
ದ್ವಾದಶೈತಾನಿ ನಾಮಾನಿ ತ್ರಿ ಸಂಧ್ಯಂಯಃ ಪಠೇನ್ನರಃ |
ನಜ ವಿಘ್ನಭಯಂತಸ್ಯ ಸರ್ವಸಿದ್ಧೀ ಕರಂ ಪ್ರಭೋ ||೫||
ವಿದ್ಯಾರ್ಥಿ ಲಭತೇ ವಿದ್ಯಾಂ ಧನಾರ್ಥಿ ಲಭತೇ ಧನಂ |
ಪುತ್ರಾರ್ಥಿ ಲಭತೇ ಪುತ್ರಾಂ ಮೋಕ್ಷಾರ್ಥಿ ಲಭತೇ ಗತಿಂ ||೬||
ಜಪೇದ ಗಣಪತಿ ಸ್ತೋತ್ರಂ ಷಡಬಿರ್ಮಾಸ್ಯೈಃ ಪಲಂ ಪದಂ|
ಸಂವತ್ಸರೇಣ ಸಿದ್ಧಿಂ ಚಂ ಲಭತೇ ನಾತ್ರ ಸಂಶಯಃ || ೭ ||
ಅಷ್ಟಭ್ಯೋ ಬ್ರಾಹ್ಮಣೆಭ್ಯಶ್ರತ ಲಿಖಿತ್ವಾಯಃ ಸಮರ್ಪಯೇತ
ತಸ್ಯವಿದ್ಯಾಭವೇತ್ಸಾರ್ವ ಗಣೇಶಸ್ಯ ಪ್ರಸಾದತಃ ||೮||

ಇತಿ ಶ್ರೀ ನಾರದ ಪುರಾಣೆ ಸಂಕಷ್ಟನಾಶನಂ ನಾಮ ಶ್ರೀ ಗಣಪತಿ ಸ್ತೋತ್ರಂ ಸಂಪೂರ್ಣಂ.

**ಅರ್ಥ -** ಹೇ ಗಣೇಶನೇ ನಿನ್ನ ಮೊದಲ ಹೆಸರು ವಕ್ರತುಂಡ, ಎರಡನೆಯದು ಏಕದಂತ,ಮೂರನೆಯದು ಕೃಷ್ಣ ಪಿಂಗಾಕ್ಷ, ನಾಲ್ಕನೆಯದು ಗಜವಕ್ರ, ಐದನೆಯದು ಲಂಬೋದರ, ಆರನೆಯದು ವಿಕಟ, ಏಳನೆಯದು ವಿಘ್ನರಾಜೇಂದ್ರ, ಎಂಟನೆಯದು ಧೂಮ್ರವರ್ಣ, ಒಂಭತ್ತನೆಯದು ಭಾಲಚಂದ್ರ, ಹತ್ತನೆಯದು ವಿನಾಯಕ, ಹನ್ನೊಂದನೆಯದು ಗಣಪತಿ, ಹನ್ನೆರಡನೆಯದು ಗಜಾನನ. ಈ ಹನ್ನೆರಡು ಹೆಸರುಗಳನ್ನು ಯಾರು ಬೆಳಿಗ್ಗೆ, ಮಧ್ಯಾಹ್ನ, ಮತ್ತು ಸಾಯಂಕಾಲ ಪಠಿಸುತ್ತಾ ಎಲ್ಲಾ ಸಿದ್ಧಿಗಳನ್ನೂ ಕೊಡಬಲ್ಲ ಪ್ರಭುವಿನ ಚಿಂತನೆ ಮಾಡುವರೋ ಅವರು ಯಾವ ವಿಧದಲ್ಲೂ ವಿಘ್ನಗಳು ಬರುವುದಿಲ್ಲ. ಯಾರಿಗೆ ಜ್ಞಾನದ ಇಚ್ಛೆಯಿದೆಯೋ ಅವರಿಗೆ ಜ್ಞಾನ ಪ್ರಾಪ್ತಿ, ಸಂಪತ್ತನ್ನು ಇಚ್ಛಿಸಿದವರಿಗೆ ಸಂಪತ್ತು, ಸಂತಾನಾಭಿಲಾಷೆ ಇರುವವರಿಗೆ ಸಂತಾನ, ಮೋಕ್ಷವನ್ನು ಇಚ್ಛಿಸಿದವರಿಗೆ ಮೋಕ್ಷವು ಸಿಗುತ್ತದೆ. ಯಾರಾದರೂ ಸರಿಯೇ ಈ ಗಣಪತಿ ಸ್ತೋತ್ರವನ್ನು ನಿತ್ಯ ಪಠಿಸುವವರಿಗೆ ಆರು ತಿಂಗಳಲ್ಲೇ ಪ್ರತಿಫಲ ದೊರಕುವುದು. ಮತ್ತು ಯಾರು ಒಂದು ವರ್ಷದವರೆಗೂ ಪಠಿಸುವರೋ ಅವರಿಗೆ ನಿಸ್ಸಂದೇಹವಾಗಿ ಸಿದ್ಧಿ ಪ್ರಾಪ್ತಿಯಾಗುತ್ತದೆ. ಯಾರು ಈ ಸ್ತೋತ್ರವನ್ನು ಬರೆದು ಎಂಟು ಬ್ರಾಹ್ಮಣರಿಗೆ ಸಮರ್ಪಿಸುವರೋ ಅವರು ಗಣೇಶನ ಕೃಪೆಯಿಂದ ವಿದ್ವಾಂಸರೆನಿಸುವರು.

ಈ ಗಣೇಶ ಸ್ತೋತ್ರವನ್ನು ಯಾರು ಒಂದೇ ಕಾಲದಲ್ಲಿ ಕುಳಿತು ೧೪೪ ಸಲ ಏಕಾಗ್ರತೆಯಿಂದ ಪಠಿಸುವರೋ ಅವರ ಯಾವುದೇ ಮನಾಭಿಲಾಷೆಯು ಪೂರ್ಣ ವಾಗುವುದೆಂದು ಈ ಸ್ತೋತ್ರದ ಮಹಿಮೆಯು ಪ್ರಸಿದ್ಧಿಗೊಂಡಿದೆ.

**ಗಣೇಶ ಮಂತ್ರ** : ಬೀಜಾಯ ಭಾಲಚಂದ್ರಾಯ ಗಣೇಶ ಪರಮಾತ್ಮನೇ|
ಪ್ರಣತ ಕ್ಲೇಶನಾಶಾಯ ಹೇರಂಭಾಯ ನಮೋ ನಮಃ||
ನಮಸ್ತಸ್ಮೈ ಗಣೇಶಾಯ ಬ್ರಹ್ಮವಿದ್ಯಾ ಪರಾಯನೇ|
ಯಸ್ಯಾಗಸ್ತ್ಯಾಯತೇ ನಾಮ ವಿಘ್ನಸಾಗರ ಶೋಷಣೆ||
ಮಹಾಕರ್ಣಾಯ ವಿದ್ರಮಹೆ ವಕ್ರತುಂಡಾಯ ಧೀಮಹೀ|
ತನ್ನೋ ದಂತಿ ಪ್ರಚೋದಯಾತ್||

(ಮುಗಿಯಿತು)

## OBITUARY



Dear Members,

With deep sorrow we share the news of the sad demise of **Mr. Gopal Bhargav** Brother of Ms. Bhavani Bhargav, on 19th June 2014 at Bengaluru.

***

We regret to inform that one of our senior most members Smt. Rukmini Iyengar wife of Sri M.S.Iyengar aged 93 years expired in Bengaluru, on 28.06.2014.

***

We regret to inform that our member Smt. Veena Joshi's mother Smt. Shobha Sheshagiri Raichur expired on 03.07.2014 at Dharwad. She was 76 years old.

We pray to God to grant eternal peace to their departed soul and give strength to family members to bear this irreparable loss.

Date of Publication : 10th of every month RNI No. 040015 / 83
MH / MR / North East / 093 / 2012- 2014 Date of Posting : 10th of every month at Mumbai Patrika Channel Sorting Office G.P.O.

### ಮುಂಬಯಿ ವಿವಿ ಕನ್ನಡ ವಿಭಾಗದಲ್ಲಿ ರಂಗ ಸಂವಾದ ಕಾರ್ಯಕ್ರಮ

# ರಂಗಭೂಮಿ ಮನುಷ್ಯನಿಗೆ ಹತ್ತಿರದ ಮಾಧ್ಯಮ : ಬಾ. ಸುಮ



ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು 2014, ಜೂ.24ರ ಮಂಗಳವಾರ ಮಧ್ಯಾಹ್ನ ಸಾಂತಾಕ್ರೂಜ್ ಪೂರ್ವದ ಕಲೀನಾ ಕ್ಯಾಂಪಸ್‌ನ ರಾನಡೆ ಭವನದಲ್ಲಿನ ಕನ್ನಡ ವಿಭಾಗದಲ್ಲಿ ಕನ್ನಡ ಕಲಾಕೇಂದ್ರ ಮುಂಬಯಿ ಇದರ ಸಹಯೋಗದೊಂದಿಗೆ ರಂಗ ಸಂವಾದ ಕಾರ್ಯಕ್ರಮ ಆಯೋಜಿಸಿತ್ತು.

ಖ್ಯಾತ ರಂಗತಜ್ಞ ಬಾ. ಸುಮ ಕೊಡಗು ಮತ್ತು ಪದ್ಮಾ ಕೊಡಗು ಅವರು ರಂಗ ಸಂವಾದವನ್ನು ನಡೆಸಿದರು.

ಬಾ. ಸುಮ ಮಾತನಾಡಿ, ರಂಗ ಶಿಕ್ಷಣ ಪರಿಪೂರ್ಣವಾದ ಜೀವನ ಕ್ರಮವನ್ನು ಹೇಳಿಕೊಡುತ್ತದೆ. ರಂಗಭೂಮಿ ಮನುಷ್ಯನಿಗೆ ಹತ್ತಿರವಾದ ಮಾಧ್ಯ. ರಂಗಭೂಮಿ, ಶಿಕ್ಷಣ, ಬದುಕು ಇವುಗಳ ಸಮತೋಲನ ಅತೀ ಅಗತ್ಯ. ಆ ಮೂಲಕ ರಂಗ ಶಿಕ್ಷಣ ವ್ಯಕ್ತಿತ್ವವನ್ನು ಮಾರ್ಪಡಿಸುತ್ತದೆ. ಮಾನವನ ವಿಕಾಸಕ್ಕೆ ರಂಗಭೂಮಿ ಪೂರಕ ಎಂಬುದಾಗಿ ರಂಗ ತಜ್ಞ ಬಾ. ಸುಮ ಅವರು ಅಭಿಪ್ರಾಯ ಪಟ್ಟರು.

ರಂಗ ಶಿಕ್ಷಣ ಗೊತ್ತಿಲ್ಲದ್ದನ್ನು ಗೊತ್ತು ಮಾಡುತ್ತದೆ. ನಮ್ಮ ಅರಿವನ್ನು ಹೆಚ್ಚಿಸುತ್ತದೆ. ಇದರಿಂದ ಎಷ್ಟೋ ವಿಷಯಗಳನ್ನು ವೇಗವಾಗಿ ಕಲಿಯಲು ಸಾಧ್ಯ ಎಂದೂ ಬಾ. ಸುಮ ತಿಳಿಸಿದರು.

ಹೆಸರಾಂತ ರಂಗ ನಿರ್ದೇಕಿ ಪದ್ಮಾ ಕೊಡಗು ಮಾತನಾಡಿ, ಮಕ್ಕಳ ರಂಗಭೂಮಿಯು ಮಕ್ಕಳಲ್ಲಿ ಆತ್ಮಸ್ಥೈರ್ಯ, ಆತ್ಮವಿಸ್ವಾಸವನ್ನು ಮೂಡಿಸಬಲ್ಲದು. ಇದೊಂದು ಚಿಕಿತ್ಸಾ ಪದ್ಧತಿಯೂ ಹೌದು. ಎಲ್ಲಾ ಶಾಲೆಗಳಲ್ಲಿ ರಂಗ ಶಿಬಿರಗಳು ನಡೆಯುಂತಾಗಬೇಕು. ಇದರಿಂದ ಮಕ್ಕಳ ವ್ಯಕ್ತಿತ್ವದಲ್ಲಿ ಬದಲಾವಣೆ ಸಾಧ್ಯ ಎಂದರು. ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ.ಎನ್. ಉಪಾಧ್ಯ ಪ್ರಾಸ್ತಾವಿಕ ನುಡಿಗಳನ್ನಾಡಿ, ಕನ್ನಡ ವಿಭಾಗ ರಂಗಭೂಮಿಯ ಅಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಚಿರಮುರಿ ಶೇಷಗಿರಿ ರಾಯರ ಶ್ರೀರಂಗರ ಕೃತಿಗಳನ್ನು ವಿಭಾಗ ಪ್ರಕಟಿಸಿದೆ. ಮಾಸ್ತಿ, ಬೇಂದ್ರೆ, ಕಾರ್ನಾಡ್ ಮೊದಲಾದವರ ನಾಟಕಗಳ ಕುರಿತು ವಿಭಾಗದಲ್ಲಿ ಸಂಶೋಧನೆ ನಡೆದಿದೆ. ಇತ್ತೀಚೆಗೆ ಡಾ. ಭರತ್‌ಕುಮಾರ್ ಪೊಲಿಪು ಅವರ ಮುಂಬಯಿ ಕನ್ನಡ ರಂಗಭೂಮಿ ಕೃತಿ ಬಿಡುಗಡೆ ಆಗಿರುವುದಕ್ಕೆ ಅಭಿಮಾನ ಪಡುವ ಸಂಗತಿ. ಇತರ ಭಾಷೆಯ ಒಳ್ಳೆಯ ನಾಟಕಗಳು ಕನ್ನಡಕ್ಕೆ ಬರಲಿ ಎಂದು ಆಶಿಸಿದರು.

ರಂಗತಜ್ಞ ಮೋಹನ್ ಮಾರ್ನಾಡ್ ಸಂವಾದ ನಿರ್ವಹಿಸಿದ್ದು, ಡಾ. ಮಮತಾ ರಾವ್, ವೀಣಾ ಶಾಸ್ತ್ರಿ, ಶ್ಯಾಮಲಾ ಪ್ರಕಾಶ್, ಮಧುಸೂದನ ರಾವ್ ಮೊದಲಾದವರು ಪಾಲ್ಗೊಂಡರು. ಕನ್ನಡ ಕಲಾಕೇಂದ್ರದ ಅಧ್ಯಕ್ಷ ಬಿ. ಬಾಲಚಂದ್ರ ರಾವ್ ಸ್ವಾಗತಿಸಿ ಮುಂಬಯಿ ಕನ್ನಡ ರಂಗಭೂಮಿಯ ಕುರಿತು ಮಾತನಾಡಿದರು. ಡಾ. ಪೂರ್ಣಿಮ ಎಸ್. ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಮಧುಸೂದನ ರಾವ್ ಧನ್ಯವಾದ ಸಮರ್ಪಿಸಿದರು.

**ಅಸೋಸಿಯೇಶನ್‌ನಲ್ಲಿ**

## ಮುಂಬರುವ ಕಾರ್ಯಕ್ರಮಗಳು

**25.07.2014ರ ಶುಕ್ರವಾರ ಸಂಜೆ ಸಂಜೆ 7.00ಕ್ಕೆ**

**ಶ್ರೀಮತಿ ಗಾಯತ್ರಿ ಸುಂದರೇಶನ್ ಅವರಿಂದ**

**"ರಾಮ ಗೋವಿಂದ ಹರಿ"**

**ಎಂಬ ಎಂ.ಎಸ್. ಸುಬ್ಬುಲಕ್ಷ್ಮೀ ಅವರ ಭಜನೆಗಳ ಆಧಾರಿತ ಕಾರ್ಯಕ್ರಮ**

**ಸ್ಮಿತಾ ಬೆಳ್ಳೂರು ಅವರಿಂದ**

**ಹಿಂದೂಸ್ತಾನಿ ಮತ್ತು ಸೂಫಿ ಗಾಯನ**

**ಆಗಸ್ಟ್ 30, 2014 ಶನಿವಾರ ಸಂಜೆ ಗಂಟೆ 6.30ಕ್ಕೆ**

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938